''ನಿರ್ವಹಣಾ ಯೋಜನೆ'' ಅಂದರೆ ಯೋಜನೆ ಜಾರಿಗಾಗಿ ಅನುಸರಿಸಬೇಕಾದ ಪ್ಲಾನ್, ಇದರಲ್ಲಿ ನಗರ ಸ್ಥಳೀಯ ಸಂಸ್ಥೆಯು ಒಪ್ಪಿಗೆ ಸೂಚಿಸಿರುವುದಕ್ಕಾಗಿ ಸಹಿ ಮಾಡಿರಬೇಕು.

''ಮಹತ್ವದ ಪ್ರತಿಕೂಲ ಪರಿಣಾಮ'' ಅಂದರೆ (a) ಈ ಒಪ್ಪಂದ ಮತ್ತು ಈ ಒಪ್ಪಂದದ ಪ್ರಾವಿಧಾನಗಳ ಅಡಿಯಲ್ಲಿ, ಸೇವೆ ಒದಗಿಸುವವರ ಸಾಮರ್ಥ್ಯದಲ್ಲಿ ಚಲಾಯಿಸಬಹುದಾದ ಯಾವುದೇ ಹಕ್ಕು, ನಿರ್ವಹಿಸಬೇಕಾದ ಯಾವುದೇ ಕರ್ತವ್ಯ / ಕಟ್ಟುಪಾಡುಗಳ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ ಮತ್ತು / ಅಥವಾ (b) ಈ ಒಪ್ಪಂದದಂತೆ ನ್ಯಾಯಪರತೆ, ಸಿಂಧುತ್ವ, ಬಂಧಕಗುಣ ಅಥವಾ ಕಾರ್ಯರೂಪದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ.

''ಪಕ್ಷಗಳು'' ಅಂದರೆ ಈ ಒಪ್ಪಂದದಡಿಯಲ್ಲಿ ಬರುವ ಪಕ್ಷಗಳು ಮತ್ತು 'ಪಕ್ಷ' ವೆಂದರೆ, ಸಂದರ್ಭಕ್ಕೆ ತಕ್ಕಂತೆ ಅವರಲ್ಲಿ ಯಾರದರೊಬ್ಬರು.

''ಅಂತ್ಯಗೊಳಿಸುವುದು'' ಅಂದರೆ ಈ ಒಪ್ಪಂದದ ಪ್ರಾವಿಧಾನಗಳ ಅನ್ವಯ ನಿಗದಿತ ಸಮಯಕ್ಕಿಂತ ಮೊದಲು ಈ ಒಪ್ಪಂದವನ್ನು, ನೋಟೀಸ್ ನೀಡಿ ಅಥವಾ ನೀಡದೆ ಕೊನೆಗೊಳಿಸುವುದು. ಆದರೆ ಸಂದರ್ಭದ ಅವಶ್ಯಕತೆ ಬೇರೆಯಾಗಿರದಿದ್ದಲ್ಲಿ, ಈ ಒಪ್ಪಂದದ ದಿನಾಂಕದಿಂದ ------- ವರ್ಷದ ಅಂತ್ಯದ ವರೆಗೂ ಒಪ್ಪಂದವು ಅಂತ್ಯಗೊಳ್ಳುವ ಸಮಯವನ್ನು ಒಳಗೊಂಡಿರುತ್ತದೆ.

''ಅಂತ್ಯಗೊಳಿಸುವ ದಿನಾಂಕ'' ಅಂದರೆ, ಅಂತ್ಯಗೊಳಿಸುವ ನೋಟೀಸಲ್ಲಿ ನಿಗದಿಪಡಿಸಿದ ಅಂತ್ಯಗೊಳ್ಳುವ ದಿನದ ದಿನಾಂಕ.

''ಅಂತ್ಯಗೊಳಿಸುವ ನೋಟೀಸ್'' ಅಂದರೆ ಈ ಒಪ್ಪಂದದ ಜಾರಿಗೊಳಿಸಬಹುದಾದ ಪ್ರಾವಿಧಾನಗಳ ಅನ್ವಯ ಒಂದು ಪಕ್ಷವು, ಇನ್ನೊಂದು ಪಕ್ಷಕ್ಕೆ ನೀಡುವ ನೋಟಿಸ್.

## 1.2 ಅರ್ಥ ವಿವರಣೆ

ಈ ಒಪ್ಪಂದದಲ್ಲಿ ಸಂದರ್ಭದ ಅವಶ್ಯಕತೆ ಬೇರೆಯಾಗಿರದಿದ್ದಲ್ಲಿ,

a. ಕಾನೂನಿನ ಪ್ರಾವಿಧಾನದ ಉಲ್ಲೇಖವು ಒಪ್ಪಂದಕ್ಕೆ ಅನ್ವಯಿಸುವಂತೆ ಕಾಲ–ಕಾಲಕ್ಕೆ ಮಾಡಲಾಗುವ ಬದಲಾವಣೆ, ಅಥವಾ ಮರು ಜಾರಿ ಅಥವಾ ಕ್ರೂಢೀಕರಿಸಿದ ಪ್ರಾವಿಧಾನಗಳನ್ನು ಒಳಗೊಂಡಿರುತ್ತದೆ ಹಾಗೂ ಇನ್ನು ಮುಂದೆ ನಡೆಯುವ ಯಾವುದೇ ವ್ಯವಹಾರಗಳಿಗೆ ಈ ಬದಲಾವಣೆಗಳು ಅಥವಾ ಮರು ಜಾರಿ ಅಥವಾ ಕ್ರೂಢೀಕರಣ ಅನ್ವಯಿಸುತ್ತದೆ ಅಥವಾ ಅನ್ವಯ ಯೋಗ್ಯವಾಗಿರುತ್ತವೆ.

b. ಅನ್ವಯಿಸುವ ಕಾನೂನುಗಳ ಉಲ್ಲೇಖವು, ಕಾನೂನಿನ ಬಲವುಳ್ಳ ಕಾನೂನುಗಳು, ಕಾಯಿದೆ, ಸುಗ್ರೀವಾಜ್ಞೆ, ನಿಯಮಗಳು, ನಿರ್ಭಂದಗಳು, ಪ್ರಕಟಣೆಗಳು, ಮಾರ್ಗದರ್ಶನಗಳು ಅಥವಾ ಬೈಲಾಗಳನ್ನು ಒಳಗೊಂಡಿರುತ್ತದೆ.

c. ಏಕವಚನವಾಗಿ ಸಂಬೋಧಿಸುವ ಶಬ್ದವು ಬಹುವಚನವನ್ನು ಒಳಗೊಂಡಿರುತ್ತದೆ ಮತ್ತು ಅದಲು–ಬದಲು ಇದೇ ಅರ್ಥವನ್ನು ಹೊಂದಿರುತ್ತದೆ ಮತ್ತು ವ್ಯಕ್ತಿಗಳನ್ನು ಸಂಬೋಧಿಸುವ ಶಬ್ದವು, ಪಾಲುಗಾರಿಕೆ, ಸಂಸ್ಥೆಗಳು, ಕಂಪನಿಗಳು, ಕಾರ್ಪೋರೇಷನ್‌ಗಳು, ಸಹಭಾಗಿತ್ವಗಳು, ಟ್ರಸ್ಟ್‌ಗಳು, ಸಂಘಗಳು ಮತ್ತಿತರ ಅಸ್ತಿತ್ವಗಳನ್ನು ಒಳಗೊಂಡಿರುತ್ತದೆ (ಪ್ರತ್ಯೇಕ ಕಾನೂನು ಅಸ್ತಿತ್ವ ಹೊಂದಿರಲಿ ಅಥವಾ ಹೊಂದಿರದಿರಲಿ)

d. ತಲೆ ಬರಹಗಳು, ಉಲ್ಲೇಖದ ಅನುಕೂಲಕ್ಕಾಗಿ ಮಾತ್ರವಾಗಿದ್ದು, ಒಪ್ಪಂದದ ರಚನೆ ಅಥವಾ ಅರ್ಥವಿವರಣೆಗೆ ಉಪಯೋಗಿಸಬಾರದು ಮತ್ತು ಒಪ್ಪಂದದ ರಚನೆ ಅಥವಾ ಅರ್ಥವಿವರಣೆಗೆ ಧಕ್ಕೆ ತರಬಾರದು.

e. 'ಒಳಗೊಳ್ಳು' ಮತ್ತು 'ಒಳಗೊಂಡಿರುವುದು' ಎಂಬ ಶಬ್ದಗಳನ್ನು ಪಿರಿಮಿತಿ ಇಲ್ಲದಂತೆ ವ್ಯಾಖ್ಯಾನಿಸುವುದು.

f. ದಿನ, ತಿಂಗಳು ಅಥವಾ ವರ್ಷದ ಉಲ್ಲೇಖ ಕ್ರಮವಾಗಿ ಕ್ಯಾಲೆಂಡರ್ ದಿನ, ಕ್ಯಾಲೆಂಡರ್ ತಿಂಗಳು ಮತ್ತು ಕ್ಯಾಲೆಂಡರ್ ವರ್ಷದ ಉಲ್ಲೇಖವಾಗಿರುತ್ತದೆ.

g. ಈ ಒಪ್ಪಂದದ ಪರಿಶಿಷ್ಟಗಳು ಒಪ್ಪಂದದ ಮುಖ್ಯ ಒಕ್ಕಣೆಯಲ್ಲಿ ಸೇರಿದ್ದರೂ, ಒಪ್ಪಂದದ ಸಮಗ್ರ ಭಾಗವಾಗಿರುತ್ತವೆ.

h. ಯಾವುದೇ ವಿವರಣೆಯ ಪರವಾನಗಿ ಅಥವಾ ದಾಖಲೆಯ ಯಾವುದೇ ಉಲ್ಲೇಖವನ್ನು ಆ ಒಪ್ಪಂದದ ಉಲ್ಲೇಖವೆಂದು ವ್ಯಾಖ್ಯಾನಿಸುವುದು. ಯಾವುದೇ ಸಮಯದಲ್ಲಿ ಯಾವುದೇ ಒಪ್ಪಂದಕ್ಕೆ, ಡೀಡ್‌ಗೆ, ಸಾಧನಕ್ಕೆ ಯಾವುದೇ ವಿವರಣಾತ್ಮಕ

ಪರವಾನಗಿ ಅಥವಾ ದಾಖಲೆಗೆ ನೀಡಿದ ಯಾವುದೇ ಉಲ್ಲೇಖವು ಆ ಒಪ್ಪಂದಕ್ಕೆ, ಡೀಡ್‌ಗೆ, ಸಾಧನಕ್ಕೆ ಪರವಾನಗಿ ಅಥವಾ ಇತರೇ ದಾಖಲೆಗೆ ಅಂತಹ ಉಲ್ಲೇಖದ ಸಮಯದಲ್ಲಿ ಬದಲಾಯಿಸಿದ, ವ್ಯತ್ಯಯಿಸಿದ, ಕೂಡಿಸಿದ, ಮಾರ್ಪಡಿಸಿದ ಅಥವಾ ತಾತ್ಕಾಲಿಕವಗಿ ವಜಾ ಮಾಡಿದ ಉಲ್ಲೇಖವನ್ನು ಉಲ್ಲೇಖವೆಂದು ವ್ಯಾಖ್ಯಾನಿಸುವುದು.

i. ಸಂದರ್ಭಕ್ಕೆ ಹೊರತಾಗಿರದಿದ್ದಲ್ಲಿ, ಈ ಒಪ್ಪಂದದಲ್ಲಿನ ಉಲ್ಲೇಖವಾಗುವ ಹೇಳಿಕೆಗಳು, ಅನುಚ್ಛೇದಗಳು, ಉಪ ಅನುಚ್ಛೇದಗಳು, ಉಪವಾಕ್ಯಗಳು ಅಥವಾ ಪರಿಶಿಷ್ಟಗಳ ಉಲ್ಲೇಖಗಳು ಈ ಒಪ್ಪಂದದ ಹೇಳಿಕೆಗಳು, ಅನುಚ್ಛೇದಗಳು, ಉಪ ಅನುಚ್ಛೇದಗಳು, ಉಪವಾಕ್ಯಗಳು ಮತ್ತು ಪರಿಶಿಷ್ಟಗಳ ಉಲ್ಲೇಖಗಳೆಂದು ಪರಿಗಣಿಸಲಾಗುತ್ತವೆ ಅಥವಾ ಈ ಒಪ್ಪಂದದ ಉಲ್ಲೇಖಗಳೆಂದು ಪರಿಗಣಿಸಲಾಗುತ್ತವೆ.

j. ಈ ಒಪ್ಪಂದದ ಅಡಿಯಲ್ಲಿ ಅಥವಾ ಅನುಸಾರವಾಗಿ ಯಾವುದೇ ಪಕ್ಷಕ್ಕೆ ಅಗತ್ಯವಾಗುವ ಯಾವುದೇ ಒಪ್ಪಂದ, ಸಮ್ಮತಿ, ಒಪ್ಪಿಗೆ, ಅಧಿಕಾರ ವಹಿಸಿಕೊಡುವುದು, ಸೂಚನೆ, ಸಂವಹನ, ಸಮಾಚಾರ ಅಥವಾ ವರದಿಗಳನ್ನು ಆ ಪಕ್ಷವು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಬರವಣಿಗೆಯಲ್ಲಿ ಕೋರಿದಾಗ ಮಾತ್ರ ಸಿಂಧುವಾಗಿರುತ್ತವೆ ಮತ್ತು ನೀಡಲಾಗುತ್ತದೆ.

k. ಯಾವುದೇ ಅವಧಿಯಲ್ಲಿ ''ಯಿಂದ'' ಪ್ರಾರಂಭವಾಗುವ ನಿರ್ದಿಷ್ಟ ದಿನ, ದಿನಾಂಕ ಮತ್ತು ''ವರೆಗೆ'' ಅಂತ್ಯವಾಗುವ ನಿರ್ದಿಷ್ಟ ದಿನ, ದಿನಾಂಕದ ಉಲ್ಲೇಖವು, ಆ ಎರಡು ದಿನಗಳು ಅಥವಾ ದಿನಾಂಕಗಳನ್ನು ಒಳಗೊಂಡಿರುತ್ತದೆ.

## ಅನುಚ್ಛೇದ 2
## ಸೇವೆ ಒದಗಿಸುವವರ ಕಟ್ಟುಪಾಡುಗಳು (ಜವಾಬ್ದಾರಿಗಳು)

ಇತರೇ ಕಟ್ಟುಪಾಡುಗಳಿಗೆ ವ್ಯತ್ಯಯ ಅಥವ ಬದಲಾವಣೆ ಇಲ್ಲದೆ, ಈ ಒಪ್ಪಂದದಲ್ಲಿ ಇರುವ ಕಟ್ಟುಪಾಡುಗಳ ಜೊತೆಗೆ, ಸೇವೆ ಒದಗಿಸುವವರು ಕೆಳಗಿನ ಕಟ್ಟುಪಾಡುಗಳನ್ನು ಹೊಂದಿರುತ್ತಾರೆ.

### 2.1 ಕಾರ್ಯಾಧಾರಿತ ಭದ್ರತೆಯಾಗಿ

a) ಯೋಜನೆಗೆ ಸಂಬಂಧಿಸಿದ ಕಟ್ಟುಪಾಡುಗಳನ್ನು ಯುಕ್ತ ಸಮಯದಲ್ಲಿ ನಿರ್ವಹಿಸಲು, ಸೇವೆ ಒದಗಿಸುವವರು, ನಗರ ಸ್ಥಳೀಯ ಸಂಸ್ಥೆಗೆ ಒಪ್ಪಂದದ ಅನುಷ್ಠಾನದ ಜೊತೆ ಜೊತೆಯಲ್ಲಿ ನಗರ ಸ್ಥಳೀಯ ಸಂಸ್ಥೆಗೆ ಒಪ್ಪಿತವಾಗಿರುವ ಯಾವುದಾದರೂ ಒಂದು ಶೆಡ್ಯೂಲ್ಡ್ ಬ್ಯಾಂಕ್‌ನಿಂದ, ಪರಿಶಿಷ್ಟ 1ರಲ್ಲಿ ತಿಳಿಸಿರುವ ರೀತಿಯಲ್ಲಿ, ಬ್ಯಾಂಕ್ ಗ್ಯಾರಂಟಿಯನ್ನು ("ಕಾಯಾಧಾರಿತ ಭದ್ರತೆಯನ್ನು')ರೂ. (ಮೊತ್ತವನ್ನು ಸೇರಿಸಿ) *[ರೂಪಾಯಿ (ಮೊತ್ತವನ್ನು ಅಕ್ಷರಗಳಲ್ಲಿ ಸೇರಿಸಿ)]* ಮೊತ್ತಕ್ಕೆ ನೀಡುವುದು.

b) ಒಪ್ಪಂದದ ದಿನಾಂಕದಿಂದ ಕಾರ್ಯ ಅನುಷ್ಠಾನದ ಭದ್ರತೆಯು ಕರಾರಿನ ಅವಧಿ, ಜೊತೆಗೆ ಮೂರು ತಿಂಗಳ ಅಧಿಕ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.

### 2.2 ಕೆಲಸದ ವ್ಯಾಪ್ತಿ

ಸೇವೆ ಒದಗಿಸುವವರು ಒಪ್ಪಿತ ನಿರ್ವಹಣಾ ಯೋಜನೆಯಂತೆ ಕೆಳಗಿನ ಕಾರ್ಯಗಳನ್ನು ನಿರ್ವಹಿಸುವುದು (ಪರಿಶಿಷ್ಟ 2ರಲ್ಲಿನ ಕಮಾಂಡ್ ಏರಿಯ ನಕ್ಷೆಯಲ್ಲಿ ಸೂಚಿಸಿರುವಂತೆ)

a) ಈ ಒಪ್ಪಂದದ ಪ್ರಕಾರ ಸಹಿ ಮಾಡಿದ 10 ದಿನಗಳ ಒಳಗಾಗಿ ಒಪ್ಪಂದಕ್ಕೆ ಒಳಪಟ್ಟ ಎಲ್ಲಾ ಕಾರ್ಯಗಳಿಗೆ ಗುತ್ತಿಗೆ ಕಾರ್ಮಿಕರ (ಸಕ್ರಮ ಹಾಗೂ ರದ್ದಿಯಾತಿ) ಕಾಯಿದೆ 1970ರ ಪ್ರಕಾರ ಲೈಸನ್ಸ್ ಪಡೆಯಬೇಕು. ಲೈಸನ್ಸ್ ಪಡೆದ ನಂತರ ಒಂದು ಪ್ರತಿಯನ್ನು ನಗರ ಸ್ಥಳೀಯ ಸಂಸ್ಥೆಗೆ ಕೊಡಬೇಕು. ನಂತರವೇ ನಗರ ಸ್ಥಳೀಯ ಸಂಸ್ಥೆಯು ಸೇವೆ ಒದಗಿಸುವವರಿಗೆ

ಕೆಲಸ ಪ್ರಾರಂಭಿಸಲು ಪತ್ರ ನೀಡತಕ್ಕದ್ದು. ನಂತರ ಸೇವೆ ಒದಗಿಸುವವರು ಕಾರ್ಮಿಕ ಇಲಾಖೆಯಲ್ಲಿ ಕೂಡ ನೊಂದಾಯಿಸಿಕೊಳ್ಳಬೇಕು.

ಟಿಪ್ಪಣಿ: ಕೆಲಸ ಪ್ರಾರಂಭಸಿಲು ಪತ್ರ ಎಂದರೆ ನಗರ ಸ್ಥಳೀಯ ಸಂಸ್ಥೆಯ ಒಪ್ಪಂದ ಪ್ರಕಾರ ಸೇವೆ ನೀಡುವವರಿಗೆ ಕೆಲಸ ಪ್ರಾರಂಭಿಸಿಲು ನೀಡುವ ಪತ್ರ.

b) ಎಲ್ಲಾ ಬೀದಿಗಳನ್ನು, ಪಾದಚಾರಿ ರಸ್ತೆಗಳನ್ನು ಹಾಗೂ ಕಲ್ಲುಹಾಸು ರಸ್ತೆಗಳನ್ನು ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ದಿನಪ್ರತಿ ಗುಡಿಸಬೇಕು. ರಸ್ತೆಯಲ್ಲಿ, ಪಾದಚಾರಿ ರಸ್ತೆಗಳಲ್ಲಿ ಹಾಗೂ ಕಲ್ಲುಹಾಸಿನ ರಸ್ತೆಗಳಲ್ಲಿ, ಬೆಳೆದ ಎಲ್ಲಾ ತರಹದ ಹಸಿರು ಮತ್ತು ಕಳೆಗಳನ್ನು ನಿಯಮಿತವಾಗಿ ಕಿತ್ತು ಹಾಕುವುದಲ್ಲದೆ ಅವುಗಳನ್ನು ಬೀದಿ ಗುಡಿಸುವಾಗ ದೊರೆತ ಕಸದೊಂದಿಗೆ ವಿಲೇವಾರಿ ಮಾಡಬೇಕು.

c) ರಸ್ತೆ ಬದಿಯ ತೆರೆದ ಮೋರಿಗಳನ್ನು (ದೊಡ್ಡ ಮಳೆನೀರು ಸಾಗುವ ಮೋರಿಗಳು ಹೊರತು ಪಡಿಸಿ) ಮತ್ತು ಮೌತ್ ಆಫ್ ಶೋಲ್ಡರ್ ಡ್ರೈನ್‌ಗಳನ್ನು ಸ್ವಚ್ಚಗೊಳಿಸಬೇಕು.

d) ಸಂಗ್ರಹವಾದ ಕಸ ಮತ್ತು ಹೂಳನ್ನು ಅದೇ ದಿನ ನಿಗದಿತ ಸ್ಥಳಕ್ಕೆ ಸಾಗಿಸಬೇಕು.

e) ಖಾತ್ರಿ ಮಾಡಿಕೊಳ್ಳಬೇಕಾದ ಅಂಶಗಳೆಂದರೆ:

i. ರಸ್ತೆ ವಿಭಜಕಗಳನ್ನು ಒಪ್ಪಿತ ನಿರ್ವಹಣಾ ಯೋಜನೆಯ ರೀತ್ಯ ಸ್ವಚ್ಛಗೊಳಿಸಬೇಕು.

ii. ಸಂಗ್ರಹದ ಮತ್ತು ಸಾಗಾಟದ ಸಮಯದಲ್ಲಿ ಕಸ ಮತ್ತು ಹೂಳನ್ನು ಚೆಲ್ಲಬಾರದು.

iii. ಗುಡಿಸುವ ಕ್ರಿಯೆಯಿಂದ, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಬಾರದು.

iv. ತೆರೆದ ರಸ್ತೆ ಬದಿಯ ಮೋರಿಗಳಿಂದ ಹೊರ ತೆಗೆದ ಹೊಳನ್ನು ಮತ್ತೆ ಮೋರಿಯಲ್ಲಿ ತುಂಬಿಸಬಾರದು.

v. ನಗರ ಸ್ಥಳೀಯ ಸಂಸ್ಥೆಯಿಂದ ಸೂಚನೆ ದೊರೆತ *[ದಿನಗಳನ್ನು ಸೇರಿಸಿ]* ದಿನದೊಳಗೆ, ಮೂಲ ಸ್ಥಾನದಿಂದ ಕಟ್ಟಡದ ಭಗ್ನಾವಶೇಷಗಳನ್ನು ಸಂಗ್ರಹಿಸಿ ಅದೇ ದಿನ ನಿಗದಿತ ಸ್ಥಳಕ್ಕೆ ಸಾಗಿಸಬೇಕು.

vi. ಬೀದಿ ಸ್ವಚ್ಛಗೊಳಿಸಿದಾಗ ದೊರೆತ ಕಸವನ್ನು, ಹೂಳನ್ನು ಕಟ್ಟಡ ಭಗ್ನಾವಶೇಷಗಳನ್ನು ಸುಡಬಾರದು ಅಥವಾ ಇನ್ನಾವುದೇ ವಿಧಾನದಲ್ಲಿ ವಿಲೇವಾರಿ ಮಾಡಬಾರದು.

vii. ಪರಿಶಿಷ್ಟ 3 ರಲ್ಲಿ ಕೊಟ್ಟಿರುವಂತೆ, ಅವರ ಸಿಬ್ಬಂದಿಗಳಿಗೆ ಸುರಕ್ಷತೆಯ ಸಾಧನಗಳನ್ನು ಒದಗಿಸುವುದರ ಮೂಲಕ, ಆರೋಗ್ಯ ಮತ್ತು ಸುರಕ್ಷತೆಯ ಮಾನದಂಡಗಳು ದೊರೆಯುವಂತೆ ನೋಡಿಕೊಳ್ಳಬೇಕು.

viii. ಸಂಗ್ರಹಣೆ ಮತ್ತು ಸಾಗಾಟದ ಜವಾಬ್ದಾರಿಯನ್ನು ಹೊರುವ, ಸೇವೆ ಒದಗಿಸುವವರ ನೌಕರರು, ಕಟ್ಟಡ ಭಗ್ನಾವಶೇಷಗಳನ್ನು ಸುರಿಯುವ ಅಥವಾ ಸುರಿಯಲು ಕಾರಣವಾಗುವ ವ್ಯಕ್ತಿಗಳಿಂದ ಯಾವುದೇ ಶುಲ್ಕವನ್ನು ವಸೂಲಿ ಮಾಡುವಂತಿಲ್ಲ.

f) ಪರಿಶಿಷ್ಟ 4ರಲ್ಲಿ ಕೊಟ್ಟಿರುವಂತೆ ವಾಹನ ಮತ್ತು ಸಲಕರಣೆಗಳನ್ನು ಒದಗಿಸಬೇಕು

g) ಯೋಜನೆಯ ಮೇಲ್ವಿಚಾರಣೆಗಾಗಿ ಸೂಕ್ತವಾದ ಅಧಿಕಾರಿಗಳನ್ನು / ಪ್ರತಿನಿಧಿಗಳನ್ನು ನೇಮಿಸಿಕೊಳ್ಳಬೇಕು ಮತ್ತು ನಿಯೋಜಿಸಬೇಕು.

ತನ್ನ ನೌಕರರಿಗೆ ಹಾಗೂ ಸಾಧನ, ಸಲಕರಣೆ ಹಾಗೂ ವಾಹನಗಳಿಗೆ ವಿಮಾ ಪಾಲಿಸಿಗಳನ್ನು ಖರೀದಿಸುವುದು ಹಾಗೂ ನಿರ್ವಹಿಸುವುದು ಮತ್ತು ಕಾಲಕಾಲಕ್ಕೆ ಸದರಿ ಪಾಲಿಸಿಗಳ ವಿಮಾ ಕಂತುಗಳನ್ನು ಕ್ಲಪ್ತವಾಗಿ ಪಾವತಿಸಿ ಒಪ್ಪಂದದ ಅವಧಿಯುದ್ದಕ್ಕೂ ಈ ಪಾಲಿಸಿಗಳು ಚಾಲ್ತಿಯಲ್ಲಿದ್ದು, ಸಿಂಧುವಾಗುರುವಂತೆ ನೋಡಿಕೊಳ್ಳುವುದು ಮತ್ತು ಲೈಸನ್ಸ್‌ನ ಪ್ರತಿಗಳನ್ನು ನಗರ ಸ್ಥಳೀಯ ಸಂಸ್ಥೆಗೆ ಒದಗಿಸುವುದು ಸೇವೆ ಒದಗಿಸುವವರ ಕರ್ತವ್ಯವಾಗಿರುತ್ತದೆ. (ಈ ಕಲಂನ್ನು ಸೇವೆ ಒದಗಿಸುವಾತನೇ ಸಾಧನ, ಸಲಕರಣೆ ಹಾಗೂ ವಾಹನಗಳನ್ನು ಒದಗಿಸಿದ ಪ್ರಕರಣಗಳಲ್ಲಿ ಅಳವಡಿಸಿಕೊಳ್ಳಬೇಕು).

h) ವ್ಯಕ್ತಿಗಳಿಗೆ ಅಥವಾ ಸ್ವತ್ತಿಗೆ ಯಾವುದೇ ಹಾನಿ ಸಂಭವಿಸುವುದನ್ನು ತಪ್ಪಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಂತಹ ಸಂದರ್ಭಗಳು ಮತ್ತು ತೆಗೆದುಕೊಂಡ ಕ್ರಮಗಳ ವರದಿಯನ್ನು ನಗರಸ್ಥಳೀಯ ಸಂಸ್ಥೆಗೆ ಸಲ್ಲಿಸುವುದು.

i) ಯೋಜನೆಯ ಅನ್ವಯ, ಪರಿಶಿಷ್ಟ 7ರಲ್ಲಿ ಕೊಟ್ಟಿರುವ ರೀತಿಯಲ್ಲಿ, ಪುರಸಭಾ ಘನತ್ಯಾಜ್ಯವನ್ನು ಸಂಗ್ರಹಿಸಿ, ಸಾಗಿಸುವ ಕಟ್ಟುಪಾಡುಗಳಿಗೆ, ನಗರ ಸ್ಥಳೀಯ ಸಂಸ್ಥೆಯಿಂದ ಪ್ರತಿ ತಿಂಗಳಿಗೆ ರಂತೆ, ಅನುಸರಣಾ ಪ್ರಮಾಣ ಪತ್ರವನ್ನು ಪಡೆಯಬೆಕು.

j) 8 ದಿನಕ್ಕಿಂತ ಹೆಚ್ಚು ದಿನ ಕೆಲಸ ಮಾಡುವ ಕಾರ್ಮಿಕರಿಗೆ ಚೆಕ್ ಮೂಲಕ ಮಾತ್ರ ಹಣ ಪಾವತಿ ಮಾಡಬೇಕು.

### 2.3 ಸಾಮಾನ್ಯ ಕಟ್ಟುಪಾಡುಗಳು

ಸೇವೆ ಒದಗಿಸುವವರು:

a) ಒಪ್ಪಮದದ ಚಾಲ್ತಿ ಅವಧಿಯ ಎಲ್ಲಾ ಸಮಯದಲ್ಲೂ, ಅನುಸರಣೆಗೆ ಬೇಕಾದ ಎಲ್ಲಾ ಅನ್ವಯಿಸುವ ಪರವಾನಗೆಸಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಪಡೆದುಕೊಳ್ಳಬೇಕು.
b) ಒಪ್ಪಂದದ ಕಾಲಾವಧಿಯ ಎಲ್ಲಾ ಸಮಯದಲ್ಲೂ ಅನ್ವಯಿಸುವ ಕಾನೂನಿನ ಪ್ರಕಾರವಾಗಿ ನಡೆದುಕೊಳ್ಳಬೇಕು.
c) ಯೋಜನೆಯ ಎಲ್ಲಾ ರೂಪಗಳು(ವಿಧಗಳು), ಪರಿಸರ, ಆರೋಗ್ಯ ಮತ್ತು ಸುರಕ್ಷತೆಯ ಕಾನೂನುಗಳನ್ನು ಮತ್ತು ಪುರಸಭಾ ಘನತ್ಯಾಜ್ಯ(ನಿರ್ವಹಣೆ ಮತ್ತು ವ್ಯವಸ್ಥಾಪನೆ)ನಿಯಮಗಳು, 2000 ಇದರ ನಿಯಮ ಮತ್ತು ಮಾಗದರ್ಶಿ ಸೂತ್ರ ಅನುಸರಿಸಬೇಕು.
d) ತನ್ನ ಕಾರ್ಮಿಕರಿಗೆ ಉಂಟಾದ ಅಪಘಾತ, ವೈಯುಕ್ತಿಕ ಗಾಯ, ಅಪಘಾತದಿಂದ ಉಂಟಾದ ದೇಹದ ಗಾಯ / ಮರಣದ ಸಂದರ್ಭದಲ್ಲಿ ಮೂರನೇ ವ್ಯಕ್ತಿಗೆ ಆದ ಹಾನಿ, ಅಸ್ತಿಗಳಿಗೆ ಆದ ನಷ್ಟ ಅಥವಾ ಹಾನಿ ಇಂತಹ ಎಲ್ಲಾ ಪ್ರಕರಣಗಳಿಗೂ ತನ್ನ ಖರ್ಚು ವೆಚ್ಚದಿಂದಲೇ ಎಲ್ಲಾ ಅವಶ್ಯಕ ವಿಮಾ ಸೌಲಭ್ಯವನ್ನು ಪಡೆದಿರಬೇಕು.
e) ಪುರಸಭಾ ಘನತ್ಯಾಜ್ಯ ನಿರ್ವಹಣೆ ಮತ್ತು ಬೀದಿಗುಡಿಸುವ ಅನೇಕ ಚಟುವಟಿಕೆಗಳನ್ನು ನಿರ್ವಹಿಸಲು ಬೇಕಾದ ವಾಹನಗಳನ್ನು, ಸಂಬಂಧಿತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಲ್ಲಿ ನೋಂದಾಯಿಸಿರಬೇಕು ಮತ್ತು ಇನ್ಸುರೆನ್ಸ್, ತೆರಿಗೆಗಳನ್ನು ಸಮಯಕ್ಕೆ ಸರಿಯಾಗಿ ಕಟ್ಟಿರಬೇಕು / ಕಟ್ಟುವುದಕ್ಕೆ ವ್ಯವಸ್ಥೆ ಮಾಡಿರಬೇಕು.

ತನ್ನ ಯಾವುದೇ ಕೆಲವು ಅಥವಾ ಎಲ್ಲಾ ಕಟ್ಟುಪಾಡುಗಳು / ಜವಾಬ್ದಾರಿಗಳನ್ನು ಉಪಗುತ್ತಿಗೆ ನೀಡಬಾರದು.

## ಅನುಚ್ಛೇದ 3
## ನಗರ ಸ್ಥಳೀಯ ಸಂಸ್ಥೆಯ ಕಟ್ಟುಪಾಡುಗಳು

3.1 ಈ ಒಪ್ಪಂದದ ಇತರೆ ಕಟ್ಟುಪಾಡುಗಳಿಗೆ ವ್ಯತ್ಯಯ ಅಥವ ಬದಲಾವಣೆ ಇಲ್ಲದೆ, ನಗರ ಸ್ಥಳೀಯ ಸಂಸ್ಥೆಯು ಜೊತೆಗೆ ಈ ಕೆಳಗಿನ ಕಟ್ಟುಪಾಡುಗಳನ್ನು ಹೊಂದಿರುತ್ತದೆ:

a) ಸೇವೆ ಒದಗಿಸುವವರಿಗೆ, ಕಟ್ಟಡ ಭಗ್ನಾವಶೇಷವನ್ನು ಸಂಗ್ರಹಿಸುವ ಸ್ಥಳದ ಬಗ್ಗೆ ಸೂಚಿಸಬೇಕು.

b) ಯೋಜನಾ ಪ್ರದೇಶದಲ್ಲಿ ಕಟ್ಟಡ ಭಗ್ನಾವಶೇಷಗಳನ್ನು ಸುರಿಯುವ ಅಥವಾ ಸುರಿಯಲು ಕಾರಣವಾಗುವ ವ್ಯಕ್ತಿಗಳು ನಗರ ಸ್ಥಳೀಯ ಸಂಸ್ಥೆಯು ಪ್ರಕಟಿಸುವ, ಪುರಸಭಾ ಘನತ್ಯಾಜ್ಯ ನಿರ್ವಹಣೆಯ ಪದ್ಧತಿಗಳನ್ನು ಅನುಸರಿಸುವಂತೆ ನೋಡಿಕೊಳ್ಳುವುದು. ಈ ಪದ್ದತಿಗಳೆಂದರೆ.

i. ಕಟ್ಟಡ ಭಗ್ನಾವಶೇಷಗಳನ್ನು ಸೇವೆ ಒದಗಿಸುವವರ ಸಿಬ್ಬಂದಿಗಳಿಗೆ ಹಸ್ತಾಂತರಿಸುವುದು.

ii. ಕಟ್ಟಡ ಭಗ್ನಾವಶೇಷಗಳನ್ನು ಬೀದಿಗಳ ಮೇಲೆ, ಪಾದಚಾರಿ ರಸ್ತೆಗಳ ಮೇಲೆ ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡಬಾರದು

c) ಒಂದು ವೇಳೆ ಕಾನೂನು ಬದಲಾವಣೆಯಿಂದ ಸೇವೆ ಒದಗಿಸುವವರು ಹೆಚ್ಚುವರಿ ಮೊತ್ತ ಭರಿಸಿದಾಗ, ಅಂಥಹ ಹೆಚ್ಚುವರಿ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಯು ಸೇವೆ ಒದಗಿಸುವವರಿಗೆ ಪಾವತಿಸಬೇಕು.

### 3.2 ಸಾಮಾನ್ಯ ಕಟ್ಟುಪಾಡುಗಳು

ನಗರ ಸ್ಥಳೀಯ ಸಂಸ್ಥೆಯು:

a. ಸೇವೆ ಒದಗಿಸುವವರಿಗೆ, ಯುಕ್ತವಿದ್ದಲ್ಲಿ ಅನ್ವಯಿಸುವ ಅಗತ್ಯ ಪರವಾನಗಿಗಳನ್ನು ಪಡೆಯಲು ಸಹಕಾರವನ್ನು ನೀಡುವುದು.

b. ಕಾನೂನು ಇಲಾಖೆಯ ಸ್ಥಳೀಯ ಕಚೇರಿಯಲ್ಲಿ ನೊಂದಾಯಿಸಬೇಕು ಹಾಗೂ ನೊಂದಾಯಿತ ಪ್ರಮಾಣ ಪತ್ರವನ್ನು ಪಡೆಯಬೇಕು.

c. ಕರಾರಿನಲ್ಲಿರುವ ತನ್ನ ಎಲ್ಲಾ ಕಟ್ಟುಪಾಡುಗಳನ್ನು ಗಮನಿಸುವುದು ಮತ್ತು ಅನುಸರಿಸುವುದು ಪಾಲಿಸುವುದು.

## ಅನುಚ್ಛೇದ 4
## ಪಾವತಿಯ ಕರಾರುಗಳು

### 4.1 ಸೇವಾ ಶುಲ್ಕದ ಪಾವತಿ

ಈ ಒಪ್ಪಂದದ ಅಗತ್ಯತೆಗೆ ಅನುಗುಣವಾಗಿ ಮತ್ತು ಈ ಒಪ್ಪಂದದಲ್ಲಿ ಕೊಟ್ಟಿರುವ ಕರಾರಿನ, ನಿಯಮ, ನಿಬಂಧನೆಯ ಅನುಸಾರ ಸೇವೆ ಒದಗಿಸುವವರು ನಿರ್ವಹಿಸುವ ಕಟ್ಟುಪಾಡುಗಳನ್ನು ಪರಿಗಣಿಸಿ, ನಗರ ಸ್ಥಳೀಯ ಸಂಸ್ಥೆಯು, ಸೇವೆ ಒದಗಿಸುವವರಿಗೆ ಪ್ರತಿ ತಿಂಗಳಿಗೆ ರೂ *[ಮೊತ್ತವನ್ನು ಸೇರಿಸಿ]* [5] *[ರೂಪಾಯಿ ಮೊತ್ತವನ್ನು ಪದಗಳಲ್ಲಿ ಸೇರಿಸಿ]*[7] ಸೇವಾ ಶುಲ್ಕವನ್ನು ನೀಡುತ್ತದೆ.

a) ಸೇವೆ ಒದಗಿಸುವವರು ಪ್ರತಿ ತಿಂಗಳ *15ನೇ* ದಿನದಂದು ಬಿಲ್‌ಗಳನ್ನು ಮತ್ತು ಅನುಸರಣೆ ಪ್ರಮಾಣ ಪತ್ರವನ್ನು [7] ಸಲ್ಲಿಸುವುದು ಅಗತ್ಯವಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಯು ಇವುಗಳನ್ನು ಪರಿಶೀಲಿಸಿ ನಗರ ಸ್ಥಳೀಯ ಸಂಸ್ಥೆಯಿಂದ ಯಾವುದೇ ಕಡಿತ / ದಂಡ / ಜುಲ್ಮಾನೆಯನ್ನು ವಿಧಿಸಿರುವುದನ್ನು ಪರಿಗಣಿಸಿ 30 ದಿನಗಳ ಒಳಗೆ ಸೇವಾ ಶುಲ್ಕವನ್ನು ಬಿಡುಗಡೆ ಮಾಡುವುದು. ವ್ಯಾಭಿನ್ನಾಭಿಪ್ರಾಯವಿರದ ಭಿನ್ನಾಭಿಪ್ರಾಯದಲ್ಲಿ

ಈ ಒಪ್ಪಂದದ ಪ್ರಕಾರ ಹಣ ಪಾವತಿ ವಿಳಂಭವಾದಲ್ಲಿ ಈ ಒಪ್ಪಂದದಿಂದ ಆಗುವ ಪರಿಣಾಮಗಳಿಗೆ ಪೂರ್ವಾಶ್ರಮವಿಲ್ಲದೇ ಬಾಕಿ ಹಣದ ಮೇಲೆ ಮಾಹೆಯಾನ ಶೇಕಡಾ 1 (ಒಂದು) ರಷ್ಟು ಬಡ್ಡಿಯನ್ನು ವಾಸ್ತವ ಪಾವತಿ ದಿನಾಂಕದಿಂದ ಪಾವತಿಸಬೇಕಾಗಿದ್ದ ದಿನಾಂಕದವರೆಗೆ ಲೆಕ್ಕ ಹಾಕಿ ಪಾವತಿ ಮಾಡಬೇಕು.

b) *ಸೇವೆ ಒದಗಿಸುವವರಿಗೆ ಮಾಡುವ ಎಲ್ಲಾ ಹಣಕಾಸಿನ ಪಾವತಿಗಳನ್ನು, ಸೇವೆ ಒದಗಿಸುವವರ ಪರವಾಗಿ,* ಮಂಡ್ಯ ನಗರಸಭೆಯು ನೀಡುವಂತೆ ಅಕೌಂಟ್ ಪೇಯಿ ಚೆಕ್ ಮುಖಾಂತರ ಮಾಡಲಾಗುವುದು.

## ಅನುಚ್ಛೇದ 5
## ಫೋರ್ಸ್ ಮೆಜ್ಯೂರ್

5.1 **ಫೋರ್ಸ್ ಮೆಜ್ಯೂರ್ ಸಂದರ್ಭ**

ಕೆಳಗಿನ ಯಾವುದೇ ಸಂದರ್ಭಗಳು, ಕಾರ್ಯದ ಮೇಲೆ ಮಹತ್ವದ ಪ್ರತಿಕೂಲ ಪರಿಣಾಮ ಬೀರಿದಲ್ಲಿ ಅವುಗಳು ಫೋರ್ಸ್ ಮೆಜ್ಯೂರ್ ಸಂದರ್ಭಗಳಾಗಿರುತ್ತವೆ.

a. ಭೂಕಂಪ, ಪ್ರವಾಹ, ನೆರೆ, ಭೂಕುಸಿತ.
b. ಸೇವೆ ಒದಗಿಸುವವರು ಅಥವಾ ಸೇವೆ ಒದಗಿಸುವವರಿಂದ ನಿಯೋಜಿಸಲ್ಪಟ್ಟ ಅವರ ಸಿಬ್ಬಂದಿಗಳಿಂದ ಆಗದ ಬೆಂಕಿ ಅನಾಹುತದಿಂದ.
c. ಭಯೋತ್ಪಾದಕ ಕೃತ್ಯ, ಯುದ್ಧ, ದಾಳಿ, ಬಂಡಾಯ, ದೊಂಬಿ, ಸೈನಿಕ ಕಾರ್ಯಾಚರಣೆ ಅಥವಾ ಆಚಿತರಿಕ ಯುದ್ಧ.

ಫೋರ್ಸ್ ಮೆಜ್ಯೂರ್ ಸಂದರ್ಭದಿಂದಾಗಿ ಈ ಒಪ್ಪಂದದಲ್ಲಿನ ಕಟ್ಟುಪಾಡುಗಳನ್ನು ನಿರ್ವಹಿಸಲು ಪಕ್ಷಗಳು ವಿಫಲಗೊಂಡಲ್ಲಿ, ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಯಾವುದೇ ಪಕ್ಷವು ಯಾವುದೇ ವಿಧಾನದಲ್ಲಿ ಇನ್ನೊಂದು ಪಕ್ಷಕ್ಕೆ ಫೋರ್ಸ್ ಮೆಜ್ಯೂರ್ ಸಂದರ್ಭವಿರುವವರೆಗು ಬಾಧ್ಯಸ್ಥರಾಗುವುದಿಲ್ಲ.

## ಅನುಚ್ಛೇದ 6
## ವೈಫಲ್ಯದ ಸಂದರ್ಭಗಳು ಮತ್ತು ಅಂತ್ಯಗೊಳಿಸುವುದು

6.1 ವೈಫಲ್ಯದ ಸಂದರ್ಭಗಳು

ವೈಫಲ್ಯದ ಸಂದರ್ಭವೆಂದರೆ, ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ ಅಥವಾ ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭ ಅಥವಾ ಸನ್ನಿವೇಶಕ್ಕೆ ಅನುಗುಣವಾಗಿ ಎರಡು ಪಕ್ಷಗಳ ವೈಫಲ್ಯದ ಸಂದರ್ಭ.

a) **ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ**

ಕೆಳಗೆ ತಿಳಿಸಿರುವ ಸಂದರ್ಭಗಳು, ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳಾಗಿರುತ್ತವೆ ( ''ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ'') ಫೋರ್ಸ್ ಮೆಜ್ಯೂರ್ ಸಂದರ್ಭಗಳನ್ನು ಹೊರತುಪಡಿಸಿ.

i. ಸೇವೆ ಒದಗಿಸುವವರು ಒಂದೇ ಒಂದು ದಿವಸದ ಮಟ್ಟಿಗೆ ಕೂಡ ಬೀದಿಗಳನ್ನು, ಪಾದಚಾರಿ ಮಾರ್ಗವನ್ನು ಗುಡಿಸದಿದ್ದರೆ ಮತ್ತು ರಸ್ತೆ ಬದಿಯ ಮೋರಿಗಳನ್ನು ಸ್ವಚ್ಛಗೊಳಿಸುವುದನ್ನು ನಿಲ್ಲಿಸಿದ್ದರೆ (ಸ್ಥಗಿತಗೊಳಿಸಿದ್ದರೆ)
ii. ಸೇವೆ ಒದಗಿಸುವವರು ನಿರ್ವಹಣಾ ಯೋಜನೆಯಲ್ಲಿರುವಂತೆ, ಕಟ್ಟಡದ ಭಗ್ನಾವಶೇಷಗಳನ್ನು ಅವುಗಳ ಮೂಲ ಸ್ಥಳಗಳಿಂದ ಸಂಗ್ರಹಿಸಿ ಅನಂತರ ಅವುಗಳನ್ನು ನಿಗದಿತ ಸ್ಥಳಕ್ಕೆ ಸಾಗಿಸುವುದನ್ನು ನಿಲ್ಲಿಸಿದ್ದರೆ (ಸ್ಥಗಿತಗೊಳಿಸಿದ್ದರೆ)
iii. ಸೇವೆ ಒದಗಿಸುವವರು ಕಟ್ಟಡದ ಭಗ್ನಾವಶೇಷಗಳನ್ನು ಅವುಗಳ ಮೂಲ ಸ್ಥಳಗಳಿಂದ ಸಂಗ್ರಹಿಸಿ ಅನಂತರ ಅವುಗಳನ್ನು ನಿಗದಿತ ಸ್ಥಳಕ್ಕೆ ಸಾಗಿಸಲು 7 ದಿನಗಳೊಳಗೆ, ನಿರಂತರವಾಗಿ 30 ದಿನಗಳವರೆಗೆ ವಿಫಲವಾದರೆ.
iv. ಸೇವೆ ಒದಗಿಸುವವರು ಉಪವಾಕ್ಯ 2.2ರಲ್ಲಿ ತಿಳಿಸಿರುವಂತೆ, ಸಲಕರಣೆ ಮತ್ತು ವಾಹನಗಳನ್ನು ಒದಗಿಸಲು ವಿಫಲವಾದಲ್ಲಿ (ಈ ಉಪವಾಕ್ಯವನ್ನು ಸೇವೆ ಒದಗಿಸುವವರು ಸಲಕರಣೆಗಳು ಮತ್ತು ವಾಹನಗಳನ್ನು ನೀಡುವುದಾಗಿದ್ದರೆ ಮಾತ್ರ ಸೇರಿಸಿ)

v. ಸೇವೆ ಒದಗಿಸುವವರು, ಒಪ್ಪಂದದ ಅಡಿಯಲ್ಲಿ ಇತರ ಯಾವುದೇ ಕಾರ್ಯ ನಿರ್ವಹಿಸುವ ಕಟ್ಟುಪಾಡುಗಳನ್ನು ನಿರ್ವಹಿಸದಿದ್ದರೆ ಮತ್ತು ಅದನ್ನು *3* ದಿನಗಳ ಒಳಗೆ ಸರಿಪಡಿಸದಿದ್ದರೆ.

vi. ಸೇವೆ ಒದಗಿಸುವವರು ಒಪ್ಪಂದ ಮೊತ್ತದ ಶೇಕಡಾ 10 ಕ್ಕಿಂತ ಹೆಚ್ಚು ದಂಡವನ್ನು ಪಾವತಿಸಿದ್ದಲ್ಲಿ.

vii. ಸೇವೆ ಒದಗಿಸುವವರು ಯೋಜನೆಯನ್ನು ನಿರಾಕರಿಸಿದರೆ ಅಥವಾ ಕೈಬಿಟ್ಟರೆ.

**b) ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭಗಳು**

ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ ಅಥವಾ ಫೋರ್ಸ್ ಮೆಜ್ಯೂರ್ ಸಂದರ್ಭ ದಿಂದ ಉಂಟಾಗದ, ಕೆಳಗೆ ತೋರಿಸಿದ ಸಂದರ್ಭಗಳು, ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭವೆಂದು ಪರಿಗಣಿತವಾಗುತ್ತವೆ (''ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭ''):

i. ನಗರ ಸ್ಥಳೀಯ ಸಂಸ್ಥೆಯು, ಉಪವಾಕ್ಯ 3.1ರಲ್ಲಿ ತಿಳಿಸಿರುವ, ಸಲಕರಣೆಗಳು ಮತ್ತು ವಾಹನಗಳನ್ನು ಒದಗಿಸಲು ವಿಫಲವಾದಲ್ಲಿ,

ii. ನಗರ ಸ್ಥಳೀಯ ಸಂಸ್ಥೆಯು, ಸೇವೆ ಒದಗಿಸುವವರಿಗೆ ಸಲ್ಲಿಸಬೇಕಾದ ಯಾವುದೇ ಬಾಕಿ ಪಾವತಿಯನ್ನು ಸಲ್ಲಿಸಲು ವಿಫಲವಾಗಿದ್ದು ಮತ್ತು ಇಂತಹ ವೈಫಲ್ಯವಾಗಿ 30 ದಿನಗಳು ಕಳೆದು ಹೋಗಿದ್ದರೆ;

iii. ನಗರ ಸ್ಥಳೀಯ ಸಂಸ್ಥೆಯು, ಒಪ್ಪಂದದ ಅಡಿಯಲ್ಲಿ ಇತರೆ ಯಾವುದೇ ಕಾರ್ಯ ನಿರ್ವಾಹಕ ಕಟ್ಟು ಪಾಡುಗಳನ್ನು ನಿರ್ವಹಿಸದಿದ್ದರೆ ಮತ್ತು ಅದನ್ನು, ಸೇವೆ ಒದಗಿಸುವವರು ಸೂಚನೆ ನೀಡಿದ 30 ದಿನಗಳೊಳಗೆ ಸರಿಪಡಿಸದಿದ್ದರೆ.

6.2 ದಂಡಗಳು

ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳಲ್ಲಿ ಅಥವಾ ಅವರ ಕಟ್ಟುಪಾಡುಗಳನ್ನು ನಿರ್ವಹಿಸದಿದ್ದಲ್ಲಿ ಪರಿಶಿಷ್ಠ 8ರಲ್ಲಿ ಕೊಟ್ಟಿರುವಂತೆ ದಂಡ (ಜುಲ್ಮಾನೆ) ವನ್ನು ನಗರ ಸ್ಥಳೀಯ ಸಂಸ್ಥೆಗೆ ಪಾವತಿಸುವುದು.

6.3 ವೈಫಲ್ಯದ ಸಂದರ್ಭಗಳಿಂದಾಗಿ ಅಂತ್ಯಗೊಳಿಸುವುದು

a) ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳಿಂದ ಅಂತ್ಯ ಗೊಳಿಸುವುದು

ಸೇವೆ ಒದಗಿಸುವವರ ವೈಫಲ್ಯದ ಸಂದರ್ಭದಲ್ಲಿ, ನಗರ ಸ್ಥಳೀಯ ಸಂಸ್ಥೆಯು ಈ ಒಪ್ಪಂದದಲ್ಲಿರುವ ಇತರೆ ಹಕ್ಕು ಮತ್ತು ಪರಿಹಾರೋಪಾಯಗಳಿಗೆ ದಕ್ಕೆಯಾಗದಂತೆ, ವೈಫಲ್ಯದ ಸಂದರ್ಭಗಳನ್ನು ಮತ್ತು ಅಂತ್ಯಗೊಳಿಸುವ ದಿನಾಂಕವನ್ನು ತಿಳಿಸುವ ನೊಟೀಸನ್ನು ನೀಡುವ ಮೂಲಕ ಈ ಒಪ್ಪಂದವನ್ನು ಅಂತ್ಯಗೊಳಿಸಬಹುದು. ಸೇವೆ ಒದಗಿಸುವವರು, ಅಂತ್ಯಗೊಳಿಸುವ ದಿನಾಂಕದ ವರೆಗೂ ಒಪ್ಪಂದದ ಕಟ್ಟು ಪಾಡುಗಳನ್ನು ನಿರ್ವಹಿಸಬೇಕು.

b) ಅಂತ್ಯಗೊಳಿಸಿದಾಗ ಪಾವತಿಗಳು

ಸೇವೆ ಒದಗಿಸುವವರ ವೈಫಲ್ಯದ ಸಂದರ್ಭದಿಂದ ಒಪ್ಪಂದವನ್ನು ಅಂತ್ಯಗೊಳಿಸಿದಲ್ಲಿ, ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆಯಿಂದ ಯಾವುದೇ ಪರಿಹಾರವನ್ನು ನೀಡುವುದಿಲ್ಲ ಮತ್ತು ಕಾರ್ಯಾಧಾರಿತ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭದಿಂದ ಒಪ್ಪಂದವನ್ನು ಅಂತ್ಯಗೊಳಿಸಿದಲ್ಲಿ ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆಯಿಂದ ಬಾಕಿ ಇರುವ ಪಾವತಿಯನ್ನು ಮತ್ತು ಕಾರ್ಯಾಧಾರಿತ ಭದ್ರತೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಜೊತೆಗೆ ನಗರ ಸ್ಥಳೀಯ ಸಂಸ್ಥೆಯು ತಿಂಗಳಿಗೆ, ಸೇವೆ ಒದಗಿಸುವವರಿಗೆ ನೀಡಬೇಕಾದ ಬಾಕಿ ಪಾವತಿಗೆ ಶೇಖಡ 2 ರಷ್ಟು ಅಧಿಕ ಪರಿಹಾರವನ್ನು ಸೇರಿಸಿ ಪಾವತಿಸುವುದು.

## ಅನುಚ್ಛೇದ 7
### ವ್ಯಾಜ್ಯ ಪರಿಹಾರ

7.1 ಸೌಹಾರ್ದಯುತ ಪರಿಹಾರ

ಈ ಒಪ್ಪಂದಕ್ಕೆ ವಿರೋಧಭಾಸವಾಗಿದೆ ಎಂದು ಸ್ಪಷ್ಟಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ, ಎರಡು ಪಕ್ಷಗಳ ಮಧ್ಯೆ ಈ ಒಪ್ಪಂದದಿಂದ ಉದ್ಭವವಾಗುವ ಯಾವುದೇ ವ್ಯಾಜ್ಯ, ಅಭಿಪ್ರಾಯ ಭೇದ ಅಥವಾ ಯಾವುದೇ ವಿವಾದಗಳನ್ನು ಮೊದಲ ಪ್ರಯತ್ನದಲ್ಲಿ, ಎರಡು ಪಕ್ಷಗಳು ಪರಸ್ಪರ ಸಂಧಾನದ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಲು ಪ್ರಯತ್ನ ಮಾಡಲಾಗುವುದು.

7.2 ಪಂಚಾಯಿತಿ / ಮಧ್ಯಸ್ಥಿಕೆ

ಯಾವುದೇ ವ್ಯಾಜ್ಯ ಸೌಹಾರ್ದಯುತವಾಗಿ ಬಗೆಹರಿಸಲು ಸಾಧ್ಯವಾಗದಿದ್ದಲ್ಲಿ ಪಂಚಾಯ್ತಿ ಮೂಲಕ ಬಗೆಹರಿಸಲಾಗುವುದು; ನಗರ ಸ್ಥಳೀಯ ಸಂಸ್ಥೆ ಇರುವ ಜಿಲ್ಲೆಯ ಜಿಲ್ಲಾದಿಕಾರಿಗಳು ಏಕಮಾತ್ರ ಪಂಚಾಯ್ತಿದಾರರಾಗಿರುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಯು ಸಾಮಾನ್ಯವಾಗಿ ಪಂಚಾಯ್ತಿ ನಡೆಯುವ ಸ್ಥಳವಾಗುತ್ತದೆ. ಪಕ್ಷಗಳು ಆ ತೀರ್ಮಾನವನ್ನು ಒಪ್ಪಕೊಳ್ಳಬೇಕಾಗುತ್ತದೆ ಅಥವಾ ಪಂಚಾಯ್ತಿಯಿಂದ ಬರುವ ತೀರ್ಮ ಪಕ್ಷಗಳಿಗೆ ಬಂಧಕಾರವಾಗಿರುತ್ತದೆ.

ವ್ಯಾಜ್ಯದ ಸಲ್ಲಿಕೆ ಮತ್ತು / ಅಥವಾ ತೀರ್ಮಾನವಾಗುವ ವರೆಗೂ, ಒಪ್ಪಂದದ ಅನ್ವಯ ಇರುವ ಕಟ್ಟುಪಾಡುಗಳನ್ನು ಪಂಚಾಯ್ತಿ ತೀರ್ಪಿಗೆ ಅನುಸಾರವಾಗಿ ಮಾಡಿಕೊಳ್ಳುವ ಮಾರ್ಪಾಟುಗಳಿಗೆ ಯಾವುದೇ ಧಕ್ಕೆಯಾಗದಂತೆ, ಪಕ್ಷಗಳು ನಿರ್ವಹಿಸುತ್ತಿರಬೇಕು.

## ಅನುಚ್ಛೇದ 8
### ಇತರೆ

8.1 ನಿಯಂತ್ರಿಸುವ ಕಾನೂನು ಮತ್ತು ಅಧಿಕಾರ ವ್ಯಾಪ್ತಿ

ಈ ಒಪ್ಪಂದವು ಭಾರತದ ಕಾನೂನುಗಳಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಒಪ್ಪಂದದಿಂದ ಉದ್ಭವಿಸುವ ಎಲ್ಲಾ ವಿಚಾರಗಳು, ಜಿಲ್ಲಾ ಕೇಂದ್ರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಇರುತ್ತವೆ.

8.2 ತಿದ್ದುಪಡಿಗಳು

ಈ ಒಪ್ಪಂದ ಮತ್ತು ಪರಿಶಿಷ್ಟಗಳು ಜೊತೆಯಾಗಿ, ಪಕ್ಷಗಳ ಮಧ್ಯೆ ಏರ್ಪಡುವ ಒಪ್ಪಂದದ ಕರಾರುಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಕಾಗುತ್ತದೆ ಮತ್ತು ಇದಕ್ಕೆ ಮಾಡಲಾಗುವ ಯಾವುದೇ ತಿದ್ದುಪಡಿ, ಮಾರ್ಪಾಟುಗಳನ್ನು ಎಲ್ಲಾ ಪಕ್ಷಗಳು ಬರವಣಿಗೆಯ ಮೂಲಕ ಸಾಕ್ಷೀಕರಿಸಿ, ಒಪ್ಪಿಕೊಂಡಾಗ ಮಾತ್ರ ಚಾಲ್ತಿಗೆ ಬರುತ್ತದೆ.

8.3 ಉದ್ದೇಶ ಮತ್ತು ಪರಿಣಾಮ

ಎಲ್ಲಾ ಪಕ್ಷಗಳು, ಒಪ್ಪಂದದ ಪ್ರಾವಿಧಾನಗಳನ್ನು ಸಂಪೂರ್ಣವಾಗಿ ಮತ್ತು ಕ್ಲುಪ್ತವಾಗಿ, ಅನುಸರಿಸಿ, ಜಾಗಿಗೊಳಿಸ್ಮತ್ತಾರೆಂದು ಈ ಮೂಲಕವಾಗಿ ಒಪ್ಪಿಕೊಳ್ಳುತ್ತಾರೆ.

8.4 ಹಕ್ಕು ಬಿಡದಿರುವವರು

ಇಲ್ಲಿ ನೀಡಲಾಗಿರುವ ಯಾವುದೇ ಕಟ್ಟುಪಾಡುಗಳನ್ನು ಯಾವುದೇ ಪಕ್ಷವು ನಿಭಾಯಿಸಲು ವಿಫಲವಾಗುವುದು, ತಡವಾಗಿ ನಿಭಾಯಿಸುವುದು, ಆ ಪಕ್ಷದ ಕರ್ತವ್ಯದ ನಿಭಾವಣೆಯಿಂದ ಬಿಡುಗಡೆಯಾಗುವುದಿಲ್ಲ ಅಥವಾ ನಿರಂತರ ಬಿಡುಗಡೆ ಎಂದು

ಅರ್ಥವಲ್ಲ ಮತ್ತು / ಅಥವಾ ಅದೇ ರೀತಿಯಾಗಿ ಸಂಭವಿಸುವ ಇತರೇ ಉಲ್ಲಂಘನೆಗಳಿಂದಾಗಿ ಒಂದು ಪಕ್ಷವು ಇನ್ನೊಂದು ಪಕ್ಷಕ್ಕಾಗಿ ನಿಭಾಯಿಸಬೇಕಾದ ಕಟ್ಟುಪಾಡುಗಳಿಂದ ಬಿಡುಗಡೆಯಾಗಿರುವುದಿಲ್ಲ ಅಥವಾ ಯಾವುದೇ ಪರಿಹಾರದ ಹಕ್ಕಿನಿಂದ ಬಿಡುಗಡೆಯಾಗುವುದಿಲ್ಲ.

8.5 ಬಂಧಕಾರಕ ಪರಿಣಾಮ

ಇಲ್ಲಿ ನೀಡಿರುವ ನಿಯಮ, ನಿಬಂಧನೆಗಳ ಅನುಸಾರ ಈ ಒಪ್ಪಂದವು ಎಲ್ಲಾ ಪಕ್ಷಗಳು ಮತ್ತು ಅದರ ವಾರಸುದಾರರು ಮತ್ತು ಒಪ್ಪಿತ ಪರಬಾರೆಗಳಿಗೆ ಬಂಧಕಾರಕವಾಗಿದ್ದೂ ಮತ್ತು ಲಾಭದಾಯಕವು ಆಗಿರುತ್ತದೆ.

8.6 ಅಸಿಂಧು ಪ್ರಾವಿಧಾನಗಳು

ಜಾರಿಯಲ್ಲಿರುವ ಅಥವಾ ಭವಿಷ್ಯದಲ್ಲಿ ಜಾರಿಗೊಳ್ಳುವ ಯಾವುದೇ ಕಾನೂನಿನಿಂದಾಗಿ ಈ ಒಪ್ಪಂದದ ಯಾವುದೇ ಪ್ರಾವಿಧಾನಗಳು ಕಾನೂನು ವಿರೋಧಿಯೆಂದು, ಅಸಿಂಧು ಎಂದು ಅಥವಾ ಜಾರಿಗೊಳಿಸಲಾಗದೆಂದು ಪರಿಗಣಿಸಲ್ಪಟ್ಟರೆ ಮತ್ತು ಈ ಒಪ್ಪಂದದ ಹಕ್ಕುಗಳು ಅಥವಾ ಕಟ್ಟುಪಾಡುಗಳ ಮೇಲೆ ವಸ್ತುಶಃ ಮತ್ತು ಮಹತ್ವದ ಪ್ರತಿಕೂಲ ಪರಿಣಾಮ ಬೀರುವುದಿಲ್ಲವೆಂದಾಗ:

a. ಆ ಪ್ರಾವಿಧಾನವನ್ನು ತೆಗೆದುಹಾಕಬಹುದು
b. ಈ ಒಪ್ಪಂದವನ್ನು, ಆ ಕಾನೂನು ವಿರೋಧಿ, ಅಸಿಂಧು, ಜಾರಿಗೊಳಿಸಲಾಗದ ಪ್ರಾವಿಧಾನಗಳು ಅದರಲ್ಲಿ ಇಲ್ಲವೆಂದು ಪರಿಗಣಿಸಿ, ವ್ಯಾಖ್ಯಾನಿಸಬಹುದು.
c. ಈ ಒಪ್ಪಂದದ ಇತರೇ ಪ್ರಾವಿಧಾನಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಲ್ಲಿರುತ್ತದೆ ಮತ್ತು ಕಾನೂನು ವಿರೋಧಿ, ಅಸಿಂಧು, ಜಾರಿಗೊಳಿಸಲಾಗದ ಪ್ರಾವಿಧಾನಗಳು ಅಥವಾ ತೆಗೆದುಹಾಕಲ್ಪಟ್ಟ ಪ್ರಾವಿಧಾನಗಳು ಅವುಗಳ ಮೇಲೆ ಪರಿಣಾಮ ಬೀರುವುದಿಲ್ಲ.

8.7 ಹೆಚ್ಚುವರಿ ದಾಖಲೆ

ಈ ಒಪ್ಪಂದವನ್ನು ಜಾರಿಗೊಳಿಸಲು, ಅಗತ್ಯವಾದ ಆದರೆ ಈ ಒಪ್ಪಂದದ ಉದ್ದೇಶಕ್ಕೆ ವಿರೋಧಾಭಾಸವಾಗಿರದ ಹೆಚ್ಚುವರಿ ದಸ್ತಾವೇಜುಗಳು ಮತ್ತು ಒಪ್ಪಂದಗಳನ್ನು ಎಲ್ಲಾ ಪಕ್ಷಗಳು ಕ್ಲುಪ್ತವಾಗಿ ತಯಾರಿಸಿ ತಲುಪಿಸಬೇಕು.

8.8 ಪ್ರತಿರೂಪಗಳು

ಈ ಒಪ್ಪಂದವನ್ನು, ಎರಡು ಪ್ರತಿರೂಪಗಳಲ್ಲಿ ಏಕ ಕಾಲದಲ್ಲಿ ಜಾರಿಗೊಳಿಸಬಹುದು, ಪ್ರತಿಯೊಂದು ರೂಪವನ್ನು ಮೂಲಪ್ರತಿಯೆಂದು ಪರಿಗಣಿಸಲಾಗುವುದು. ಆದರೆ, ಈ ಎರಡು ರೂಪಗಳು ಒಟ್ಟಿಗೆ ಒಂದೇ ದಸ್ತಾವೇಜೆಂದು ಪರಿಗಣಿಸಲಾಗುವುದು.

8.9 ನೋಟೀಸ್‌ಗಳು

ಒಪ್ಪಂದದ ನಿಬಂಧನೆಗಳನುಸಾರ ನೀಡಲಾಗುವ ನೋಟೀಸ್‌ಗಳು, ಕೋರಿಕೆಗಳು, ಬೇಡಿಕೆಗಳು ಮತ್ತಿತರ ಸಂವಾಹನಗಳನ್ನು ಬರವಣಿಗೆಯ ಮೂಲಕ ಮಾಡಬೇಕು ಮತ್ತು ಅವುಗಳನ್ನು ವೈಯಕ್ತಿಕವಾಗಿ ತಲುಪಿಸಬೇಕು, ಅಂಚೆ ವೆಚ್ಚವನ್ನು ಪಾವತಿಸಿದ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಬೇಕು (ಖಾತರಿಗೊಳಿಸಿಕೊಳ್ಳಬೇಕು ಮತ್ತು ಲಕೋಟೆಯ ಮೇಲೆ ಪೋಸ್ಟೇಜ್ ಪ್ರೀಪೇಡ್ ರಿಜಿಸ್ಟರ್ಡ್ ಅಂಚೆ ಎಂದು ಬರೆದಿರಬೇಕು) ಮತ್ತು ಕೆಳಗೆ ತಿಳಿಸಿದ ವಿಳಾಸ ಅಥವಾ ಕಾಲ–ಕಾಲಕ್ಕೆ ಪಕ್ಷವು ತಿಳಿಸಿದ ವಿಳಾಸ, ವಿಳಾಸಗಳು ಅಥವಾ ಸ್ಥಳಕ್ಕೆ ತಲುಪಿಸಬೇಕು.

**ನಗರ ಸ್ಥಳೀಯ ಸಂಸ್ಥೆಗೆ:**
ನಗರಸಭಾ ಕಾರ್ಯಾಲಯ,
ಮಂಡ್ಯ

**ಸೇವೆ ಒದಗಿಸುವವರಿಗೆ:**
---------------

ಒಂದು ಪಕ್ಷವು, ಇನ್ನೊಂದು ಪಕ್ಷಕ್ಕೆ, ಬರವಣಿಗೆಯ ಮೂಲಕ ಬೇರೆ ವಿಳಾಸವನ್ನು ಸೂಚನೆ ನೀಡಿ ತಿಳಿಸಿರದಿದ್ದರೆ, ಈ ಒಪ್ಪಂದದನ್ವಯ ಕಳುಹಿಸಲಾಗುವ ಯಾವುದೇ ನೋಟೀಸ್, ಕೋರಿಕೆ, ಬೇಡಿಕೆ ಅಥವಾ ಇನ್ನಾವುದೇ ಸಂವಾಹನವು

i. ವೈಯಕ್ತಿಕವಾಗಿ ತಲುಪಿಸಿದಲ್ಲಿ, ತಲುಪಿಸಿದ ದಿನದಂದು
ii. ಅಂಚೆಯ ಮೂಲಕ ಕಳುಹಿಸಿದ್ದಲ್ಲಿ, ರವಾನೆ ಮಾಡಿದ ಹದಿನೈದು (15) ದಿನಗಳಲ್ಲಿ
iii. ಟೆಲೆಕ್ಸ್ ಅಥವಾ ಕೇಬಲ್ ಮೂಲಕ ಕಳುಹಿಸಿದ್ದರೆ, ಕಳುಹಿಸಿದ ದಿನಾಂಕದಂದು ತಲುಪಿದೆ ಎಂದು ಪರಿಗಣಿಸಲಾಗುವುದು.

ಮೇಲೆ ತಿಳಿಸಿದ ದಿನಾಂಕದಿಂದ ಈ ಒಪ್ಪಂದವನ್ನು ಅನುಷ್ಠಾನಗೊಳಿಸುವ ಸಾಕ್ಷಿಯಾಗಿ ಎರಡು ಪಕ್ಷಗಳು ಸಹಿ ಮಾಡಿ ಸಲ್ಲಿಸಿವೆ.

ನಗರ ಸ್ಥಳೀಯ ಸಂಸ್ಥೆಯ ಪರವಾಗಿ,

(ಸಹಿ)
[ಹೆಸರು]
[ಪದನಾಮ]

ಸಹಿ ಮಾಡಿ, ಸೀಲ್ ಮಾಡಿ ತಲುಪಿಸಲಾಗಿದೆ ಸೇವೆ ಒದಗಿಸುವವರ ಪರವಾಗಿ:
ಇವರುಗಳ ಸಮ್ಮುಖದಲ್ಲಿ:

1)

2)

**ಪರಿಶಿಷ್ಟ 1**

## ಕಾರ್ಯಾಧಾರಿತ ಭದ್ರತಾ ಠೇವಣಿ

(ಬ್ಯಾಂಕ್ ಗ್ಯಾರಂಟಿಯ ನಮೂನೆ) [8]

ಇನ್ನು ಮುಂದೆ "ಖಾತ್ರಿದಾರರು" (ವಿಷಯ ಅಥವಾ ಸಂದರ್ಭಕ್ಕೆ ವ್ಯತಿರಿಕ್ತವಾಗದಂತೆ, ವಾರಸುದಾರರು ಮತ್ತು ಪ್ರತಿನಿಧಿಗಳನ್ನು ಒಳಗೊಂಡಂತೆ) ಎಂದು ಕರೆಯಲ್ಪಡುವ, ------------------------------------------------ ನಲ್ಲಿ ಮುಖ್ಯ / ನೋಂದಾಯಿತ ಕಛೇರಿ ಹೊಂದಿರುವ --------------------- *[ಬ್ಯಾಂಕ್‌ನ ಹೆಸರನ್ನು ಸೇರಿಸಿ]* ನಿಂದ -------- ಇಸವಿ ----------- ಮಾಹೆಯ ------- ದಿನದಂದು ಮಾಡಲಾದ ಡೀಡ್ ಆಫ್ ಗ್ಯಾರಂಟಿ.

ಇವರ ಪರವಾಗಿ

*ನಗರಸಭಾ ಕಾರ್ಯಾಲಯ, ಮಂಡ್ಯದಲ್ಲಿ* ಕಛೇರಿಯನ್ನು ಹೊಂದಿರುವ *ಮಂಡ್ಯ ನಗರಸಭೆ,* ಮುಂದೆ "ನಗರ ಸ್ಥಳೀಯ ಸಂಸ್ಥೆ" ಎಂದು ಕರೆಯಲ್ಪಡುವ ಮತ್ತು ಪೌರಾಯುಕ್ತರು ಅವರಿಂದ ಪ್ರತಿನಿಧಿಸಲ್ಪಟ್ಟಿದೆ ಮತ್ತು ಸಂದರ್ಭದ ಅರ್ಥಕ್ಕೆ ವ್ಯತ್ಯಯವಾಗದಂತೆ, ಆಡಳಿತಾಧಿಕಾರಿಗಳು, ವಾರಸುದಾರರನ್ನು ಅಥವಾ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

ಏನೆಂದರೆ

A ದಿನಾಂಕ: ---------- ರಂದು ನಗರ ಸ್ಥಳೀಯ ಸಂಸ್ಥೆ ಮತ್ತು ---------------------------------- ---- [ಖಾಯಂ ವಿಳಾಸವನ್ನು ಸೇರಿಸಿ] [9] ವಿಳಾಸದಲ್ಲಿ ಕಂಪನಿ ಕಾಯ್ದೆ 1956ರ ಪ್ರಾವಿಧಾನಗಳ ಅನ್ವಯ ಸ್ಥಾಪಿಸಲಾದ ಕಂಪನಿಯನ್ನು ಹೊಂದಿರುವ ---------- *[ಸೇವೆ ಒದಗಿಸುವವರ ಹೆಸರನ್ನು ಸೇರಿಸಿ]* ("ಸೇವೆ ಒದಗಿಸುವವರು") ಇವರುಗಳ ನಡುವೆ ಏರ್ಪಟ್ಟ ಒಪ್ಪಂದದ ಪ್ರಕಾರ ಸೇವೆ ಒದಗಿಸುವವರು, ನಗರ ಸ್ಥಳೀಯ ಸಂಸ್ಥೆಯಲ್ಲಿ ಬೀದಿಗಳನ್ನು, ಪಾದಚಾರಿ ರಸ್ತೆಗಳನ್ನು ಮತ್ತು ಕಲ್ಲುಹಾಸು ರಸ್ತೆಗಳನ್ನು ಗುಡಿಸಲು, ರಸ್ತೆ ಬದಿಯ ಮೋರಿಗಳನ್ನು ಸ್ವಚ್ಛಗೊಳಿಸಲು, ರಸ್ತೆ ಮತ್ತು ಮೋರಿ ಬದಿಯ ಗಿಡಗೆಂಟೆಗಳನ್ನು ಬುಡಸಮೇತ ತೆಗೆಯಲು, ಕಟ್ಟಡ ನಿರ್ಮಾಣದ ಅವಶೇಷಗಳನ್ನು ಮೂಲದಿಂದ ಸಂಗ್ರಹಿಸಲು ಮತ್ತು ಅವುಗಳನ್ನು ನಿಗದಿತ ಸ್ಥಳಕ್ಕೆ ಕಳುಹಿಸುವ (ಇನ್ನು ಮುಂದೆ "ಯೋಜನೆ") ಸೇವೆ ಒದಗಿಸಲು ಒಪ್ಪಿಕೊಂಡಿರುತ್ತಾರೆ.

B ಯೋಜನೆಯ ಅನುಷ್ಟಾನಕ್ಕಾಗಿ ಒಪ್ಪಂದದ ಕಟ್ಟುಪಾಡುಗಳ ಅನ್ವಯ ಕ್ಲುಪ್ತ ಕಾಲದಲ್ಲಿ ಕಾರ್ಯನಿರ್ವಹಿಸುವ ಖಾತ್ರಿಯಲ್ಲಿ ಸೇವೆ ಒದಗಿಸುವವರು, ಒಪ್ಪಂದದಲ್ಲಿ ತಿಳಿಸಿರುವಂತೆ ನಗರ ಸ್ಥಳೀಯ ಸಂಸ್ಥೆಗೆ, ರೂ. [ಮೊತ್ತವನ್ನು ಸೇರಿಸಿ] [ರೂಪಾಯಿ ಮೊತ್ತವನ್ನು ಪದಗಳಲ್ಲಿ ಸೇರಿಸಿ] ಗಳಿಗೆ, ನಿರ್ಭಂದವಿಲ್ಲದ ಮತ್ತು ಹಿಂದೆ ಪಡೆಯಲಾಗದ ಬ್ಯಾಂಕ್ ಗ್ಯಾರಂಟಿಯನ್ನು ನೀಡಬೇಕು.

[8] ಭಾರತೀಯ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು

[9] ವ್ಯಕ್ತಿಯಾಗಿದ್ದಲ್ಲಿ ಹೆಸರು ಮತ್ತು ವಿಳಾಸವನ್ನು ಸೇರಿಸುವುದು

C ಸೇವೆ ಒದಗಿಸುವವರ ಕೋರಿಕೆಯ ಮೇರೆಗೆ, ಖಾತ್ರಿದಾರರು, ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸಲು ಒಪ್ಪಿರುತ್ತಾರೆ ಮತ್ತು ಇದು ಸೇವೆ ಒದಗಿಸುವವರು ಯೋಜನೆಗೆ ಸಂಬಂಧಿಸಿದ ಕಟ್ಟು ಪಾಡುಗಳನ್ನು ಕ್ಲುಪ್ತ ಸಮಯದಲ್ಲಿ ನಿರ್ವಹಿಸಲು ಗ್ಯಾರಂಟಿಯಾಗಿರುತ್ತದೆ.

ಈ ಡೀಡ್‌ನ್ನು ಕೆಳಕಾಣಿಸಿದಂತೆ ಸಾಕ್ಷೀಕರಿಸಲಾಗಿದೆ:

1. ಸೇವೆ ಒದಗಿಸುವವರು ಯೋಜನೆಯ ಎಲ್ಲಾ ಕಟ್ಟುಪಾಡುಗಳನ್ನು ನಿಯಮಿತವಾಗಿ ನಿರ್ವಹಿಸಲು ಮತ್ತು ಒಪ್ಪಂದದಲ್ಲಿ ತಿಳಿಸಿರುವಂತೆ, ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ, ಖಾತ್ರಿದಾರರು ಹಿಂತೆಗೆಯಲಾಗದ ಖಾತ್ರಿಯನ್ನು ನೀಡಿರುತ್ತಾರೆ.

2. ನಗರ ಸ್ಥಳೀಯ ಸಂಸ್ಥೆಯು ಬರವಣಿಗೆಯಲ್ಲಿ ಸೇವೆ ಒದಗಿಸುವವರು ಒಪ್ಪಂದದ ಕಟ್ಟುಪಾಡುಗಳನ್ನು ನಿರ್ವಹಿಸಲು ವಿಫಲರಾಗಿರುವುದನ್ನು ಸೂಚಿಸಿ, ಬೇಡಿಕೆ ಮಂಡಿಸಿದ [ದಿವಸಗಳನ್ನು ಸೇರಿಸಿ] ದಿನಗಳೊಳಗೆ, ಖಾತ್ರಿದಾರರು ರೂಪಾಯಿ [ಮೊತ್ತವನ್ನು ಸೇರಿಸಿ] [ರೂಪಾಯಿ ಮೊತ್ತವನ್ನು ಪದಗಳಲ್ಲಿ ಸೇರಿಸಿ] ಯನ್ನು ಯಾವುದೇ ತಕರಾರು ಇಲ್ಲದೆ ನಗರ ಸ್ಥಳೀಯ ಸಂಸ್ಥೆಗೆ ಪಾವತಿಸಬೇಕು. ಖಾತ್ರಿದಾರರು, ಸೇವೆ ಒದಗಿಸುವವರ ವೈಫಲ್ಯದ ಸತ್ಯಾಸತ್ಯದ ಪರೀಕ್ಷೆಯನ್ನು ಮಾಡುವುದಾಗಲಿ ಅಥವಾ ನಗರ ಸ್ಥಳೀಯ ಸಂಸ್ಥೆಯ ಬೇಡಿಕೆಯ ಆಧಾರವನ್ನು ಪರೀಕ್ಷಿಸುವಂತಿಲ್ಲ ಮತ್ತು ಸೇವೆ ಒದಗಿಸುವವರು ಅಥವಾ ಇತರೆ ವ್ಯಕ್ತಿಗಳು ಎತ್ತುವ ತಕರಾರು ಅಥವಾ ನೀಡುವ ನಿರ್ದೇಶನಗಳನ್ನು ಅಲಕ್ಷಿಸಿ, ಬೇಡಿಕೆಯ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗೆ ಪಾವತಿಸಬೇಕು. ಖಾತ್ರಿದಾರರ ಎಲ್ಲಾ ಕಟ್ಟುಪಾಡುಗಳು, ಎಲ್ಲಾ ಬೇಡಿಕೆಯನ್ನು ಪಾಲಿಸಿದಲ್ಲಿ ಕೊನೆಗೊಳ್ಳುತ್ತದೆ. ಈ ಪ್ರಾವಿಧಾನಗಳನ್ವಯ ಎಲ್ಲಾ ಬೇಡಿಕೆಗಳನ್ನು ತಕ್ಕ ಸಮಯದಲ್ಲಿ ಪೂರೈಸುವ ವರೆಗೂ ಖಾತ್ರಿದಾರರ ಜವಾಬ್ದಾರಿಗಳು ಉಳಿಯುತ್ತವೆ.

Formatted: Bullets and Numbering

Deleted: (

Deleted: )

3. ಖಾತ್ರಿಯನ್ನು ಪರಿಣಾಮಕಾರಿಯಾಗಿಸಲು ನಗರ ಸ್ಥಳೀಯ ಸಂಸ್ಥೆಯು ಖಾತ್ರಿದಾರರನ್ನು ಪ್ರಧಾನ ಸಾಲಗಾರನೆಂದು ಪರಿಗಣಿಸಬಹುದಾಗಿದೆ. ಒಪ್ಪಂದದ ಅಥವಾ ಇತರೆ ದಾಖಲೆಗಳ ನಿಯಮ ನಿಬಂಧನೆಗಳ, ತಕಾರುಗಳ ವ್ಯತ್ಯಯದಿಂದ ಅಥವಾ ಸೇವೆ ಒದಗಿಸುವವರಿಗೆ, ನೀಡಿದ ಕಾರ್ಯಾವಧಿ ವಿಸ್ತರಣೆ ಅಥವಾ ನಗರ ಸ್ಥಳೀಯ ಸಂಸ್ಥೆಯು ತನ್ನ ಅಧಿಕಾರವನ್ನು ಚಲಾಯಿಸದಿದ್ದ/ಚಲಾವಣೆಯನ್ನು ಮುಂದೂಡಿದ/ತಡವಾಗಿ ಚಲಾಯಿಸಿದ ಅಥವಾ ನಗರ ಸ್ಥಳೀಯ ಸಂಸ್ಥೆಯಿಂದ ಸೇವೆ ಒದಗಿಸುವವರಿಗೆ ತೋರಿಸಿದ ವಿಶ್ವಾಸವು ಖಾತ್ರಿದಾರರ ಕಟ್ಟುಪಾಡುಗಳ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಆ ರೀತಿಯ ವ್ಯತ್ಯಯ, ವಿಸ್ತರಣೆ, ಮುಂದೂಡುವಿಕೆ, ನಗರ ಸ್ಥಳೀಯ ಸಂಸ್ಥೆಯು ತನ್ನ ಹಕ್ಕುಗಳನ್ನು ಚಲಾಯಿಸದೆ ಇರುವ, ತಡವಾಗಿ ಚಲಾಯಿಸುವ ಅಥವಾ ನಗರ ಸ್ಥಳೀಯ ಸಂಸ್ಥೆಯು ತೋರಿಸುವ ವಿಶ್ವಾಸ ಇವು ಯಾವುದು ಖಾತ್ರಿದಾರರ ಕಟ್ಟುಪಾಡುಗಳನ್ನು ವಿಸ್ತರಿಸದಿದ್ದಲ್ಲಿ ಖಾತ್ರಿದಾರರನ್ನು ಕಟ್ಟುಪಾಡುಗಳಿಂದ ಮುಕ್ತಗೊಳಿಸುವುದಿಲ್ಲ.

Formatted: Bullets and Numbering

4. ಒಪ್ಪಂದದ ಉಪಬಂಧಗಳ ಅನುಸಾರ ನಗರ ಸ್ಥಳೀಯ ಸಂಸ್ಥೆಯಿಂದ ಅವಧಿಗೆ ಮುನ್ನ ಬಿಡುಗಡೆಗೊಳ್ಳದಿರುವ ಸಂದರ್ಭವನ್ನು ಹೊರತುಪಡಿಸಿ, ಖಾತ್ರಿಯನ್ನು ಹಿಂತೆಗೆದುಕೊಳ್ಳಲಾಗದು ಮತ್ತು---------------ವರೆಗೆ ಪೂರ್ಣ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿರುತ್ತದೆ ಮತ್ತು ಚಾಲ್ತಿಯಲ್ಲಿರುತ್ತದೆ. ಖಾತ್ರಿದಾರರ ಒಟ್ಟು ಹೊಣೆಗಾರಿಕೆಯು ರೂ------------ (ರೂಪಾಯಿ ಮಾತ್ರ) ಗೆ ಸೀಮಿತವಾಗಿರುತ್ತದೆ.

Formatted: Bullets and Numbering

5. ಸೇವೆ ಒದಗಿಸುವವರ/ಖಾತ್ರಿದಾರರ ರಚನೆಗಳಲ್ಲಿ ಆದ ಬದಲಾವಣೆ ಅಥವಾ ಮುಚ್ಚಲ್ಪಟ್ಟಲ್ಲಿ ಅಥವಾ ಸೇವೆ ಒದಗಿಸುವವರು/ಖಾತ್ರಿದಾರರು ಇತರೆ ವ್ಯಕ್ತಿಯೊಂದಿಗೆ ವಿಲೀನವಾಗುವುದು ಅಥವಾ ಸಂಯೋಜನೆ ಹೊಂದುವುದು, ಖಾತ್ರಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

Formatted: Bullets and Numbering

6. ಖಾತ್ರಿದಾರನು, ಇಲ್ಲಿ ತಿಳಿಸಿರುವ ಕಟ್ಟುಪಾಡುಗಳನ್ನು ನಿಭಾಯಿಸಲು ಈ ಖಾತ್ರಿಯನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾನೆ ಮತ್ತು ಕೆಳಗೆ ಸಹಿ ಮಾಡಿದ ಸಹಿದಾರನು,------------- ರ ಅನ್ವಯ ನೀಡಲಾದ ಅಧಿಕಾರದಿಂದ ಈ ಖಾತ್ರಿಯನ್ನು ನೇರವೇರಿಸಲು ಅಧಿಕಾರವನ್ನು ಹೊಂದಿರುತ್ತಾನೆ.

ಮೇಲೆ ತಿಳಿಸಿರುವ ದಿನಾಂಕ, ತಿಂಗಳು ಮತ್ತು ವರ್ಷದಂದು ಇದಕ್ಕೆ ಸಾಕ್ಷಿಯಾಗಿ ಖಾತ್ರಿದಾರರು ಸಹಿ ಮಾಡಿರುತ್ತಾರೆ.

ಸಹಿ ಮಾಡಲಾಗಿದೆ ಮತ್ತು ರವಾನಿಸಲಾಗಿದೆ

ಇಂದ------------- ಬ್ಯಾಂಕ್

ಶ್ರೀ ------------- ರವರ ಕೈಯಿಂದ

ಅದರ -------------- ಮತ್ತು ಅಧಿಕೃತ ಅಧಿಕಾರಿ.

**ಪರಿಶಿಷ್ಟ 2**

## ಯೋಜನೆಯ ವಿವರಗಳು

ಪೌರಬೀದಿ ಗುಡಿಸುವುದು ಮತ್ತು ಕಟ್ಟಡ ಭಗ್ನಾವಶೇಷಗಳನ್ನು ಅದರ ಮೂಲದಿಂದ ಸಂಗ್ರಹಿಸುವ ಸಲುವಾಗಿ, ಬಿಡ್ಡಿರ್‌ನ ಕೆಲಸದ ವ್ಯಾಪ್ತಿಯನ್ನು ಕೆಳಗೆ ನೀಡಲಾಗಿದೆ.

h) ಬೀದಿಗಳು, ಪಾದಚಾರಿ ರಸ್ತೆಗಳು ಮತ್ತು ತೆರದ ರಸ್ತೆಬದಿಯ ಮೋರಿಗಳು/ ಮೌತ್ ಆಫ್‌ಮೌತ್ ಆಫ್ ಶೋಲ್ಡಲ್ಡರ್ ಡ್ರೈನ್‌ಗಳನ್ನುಗುಡಿಸುವುದು.

ಬೀದಿಗಳು, ಪಾದಚಾರಿ ರಸ್ತೆಗಳು, ಕಲ್ಲು ಹಾಸುಗಳನ್ನು ಮತ್ತು ರಸ್ತೆಬದಿಯ ತೆರೆದ ಮೋರಿಗಳು / ಮೌತ್ ಆಫ್ ಶೆಲ್ಟರ್ ಡ್ರೈನ್‌ಗಳನ್ನು ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ, ದಿನಂ ಪ್ರತಿ ಅಥವಾ ಕೋಷ್ಟಕದಲ್ಲಿ ತಿಳಿಸಿರುವಂತೆ ಗುಡಿಸಬೇಕು / ಸ್ವಚ್ಛಗೊಳಿಸಬೇಕು. ರಸ್ತೆಯಲ್ಲಿ, ಪಾದಚಾರಿ ರಸ್ತೆಯಲ್ಲಿ, ತೆರೆದ ಮೋರಿಗಳಲ್ಲಿ / ಮೌತ್ ಆಫ್ ಶೆಲ್ಟರ್‌ಗಳಲ್ಲಿ ಬೆಳೆದ ಎಲ್ಲಾ ಸಸ್ಯ / ಕಳೆಗಳನ್ನು, ಇತರ ಕಸದೊಂದಿಗೆ ನಿಯಮಿತವಾಗಿ ಬುಡಸಮೇತ ತೆಗೆದುಹಾಕಬೇಕು. ಗುಡಿಸುವ ಕೆಲಸವನ್ನು ದಿನಂ ಪ್ರತಿ ಮಾಡಬೇಕು ಮತ್ತು ಸಂಗ್ರಹವಾದ ಕಸವನ್ನು ಮತ್ತು ಹೂಳನ್ನು ಅದೇ ದಿನ *[ನಿಗದಿತ ಸ್ಥಳಗಳ ವಿವರಗಳನ್ನು ಸೇರಿಸಿ]* ಕ್ಕೆ ಸಾಗಿಸಬೇಕು. ಪ್ರತಿದಿನ ಪಾದಚಾರಿ ರಸ್ತೆಯ ಅಂಚು ಮತ್ತು ರಸ್ತೆ ವಿಭಜನವನ್ನು ಒರೆಸಬೇಕು. ಗುಡಿಸುವ ಚಟುವಟಿಕೆಯ ಸಂದರ್ಭದಲ್ಲಿ, ವಾಹನಗಳ ಓಡಾಟಕ್ಕೆ ಯಾವುದೇ ತೊಂದರೆ ಉಂಟಾಗದಂತೆ ಎಚ್ಚರಿಕೆಯನ್ನು ವಹಿಸಬೇಕು.

ಬೀದಿ ಗುಡಿಸುವ ಪ್ರದೇಶ ಮತ್ತು ಬೀದಿಗಳನ್ನು ಕೆಳಕಂಡಂತೆ ಸೂಚಿಸಲಾಗಿದೆ

| ವಾರ್ಡ್ ಸಂಖ್ಯೆ | ರಸ್ತೆಯ ಉದ್ದ (ಅಂದಾಜು ಮೀಟರ್‌ಗಳು) | ವರ್ಗ A(ಅಂದಾಜು ಮೀಟರ್‌ಗಳು) | ವರ್ಗ B(ಅಂದಾಜು ಮೀಟರ್‌ಗಳು) | ವರ್ಗ C(ಅಂದಾಜು ಮೀಟರ್‌ಗಳು) |
|---|---|---|---|---|
| **19** | 7150 | 5900 | 1250 | 0 |
| **20** | 4550 | 1600 | 2950 | 0 |
| **21** | 3475 | 765 | 1950 | 760 |
| **22** | 8200 | 2050 | 500 | 5650 |
| **23** | 6300 | 2800 | 2100 | 1400 |
| **24** | 7400 | 0 | 2850 | 4583 |
| **25** | 8260 | 3560 | 4700 | 0 |
| **26** | 7847 | 2850 | 1015 | 3982 |
| **27** | 5825 | 600 | 3200 | 2025 |
| **28** | 7100 | 2450 | 1450 | 3200 |
| **29** | 4575 | 2275 | 2300 | 0 |
| **30** | 9635 | 1500 | 4735 | 3400 |
| **31** | 7650 | 2650 | 5000 | 0 |

ವರ್ಗ A – ಪ್ರತಿದಿನ ಗುಡಿಸಬೇಕಾದ ರಸ್ತೆಗಳು

ವರ್ಗ B – ವಾರದಲ್ಲಿ ಎರಡು ದಿನ ಗುಡಿಸಬೇಕಾದ ರಸ್ತೆಗಳು

ವರ್ಗ C – ವಾರದಲ್ಲಿ ಒಂದು ದಿನ ಗುಡಿಸಬೆಕಾದ ರಸ್ತೆಗಳು

ಸ್ವಚ್ಛಗೊಳಿಸಲು ಪರಿಗಣಿಸಬೇಕಾದ ರಸ್ತೆ ಬದಿಯ ತೆರೆದ ಮೋರಿ / ಮೌತ್ ಆಫ್ ಶೆಲ್ಟ್‌ರ್ ಡ್ರೈನ್‌ಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ:

**ಪರಿಶಿಷ್ಟ 3**

## ಸುರಕ್ಷಿತ ಸಾಧನಗಳ ಮತ್ತು ಆರೋಗ್ಯ ಮತ್ತು ಸುರಕ್ಷತೆಯ ಪ್ರಮಾಣಗಳು (Standards)

1. ಸೇವೆ ಒದಗಿಸುವವರು, ಯೋಜನೆಯಲ್ಲಿ ತಿಳಿಸಿರುವ ಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ ಬಳಸುವ ಸಲಕರಣೆ ಮತ್ತು ವಾಹನಗಳನ್ನು ಕನಿಷ್ಠ ವಾರಕ್ಕೆ ಒಮ್ಮೆ ಸ್ವಚ್ಛಗೊಳಿಸಬೇಕು/ತೊಳೆಯಬೇಕು/ಸೋಂಕು ನಿವಾರಿಸಬೇಕು.

Formatted: Bullets and Numbering

2. ಸೇವೆ ಒದಗಿಸುವವರು, ತಮ್ಮ ಸಿಬ್ಬಂದಿಗಳ ಆರೋಗ್ಯವನ್ನು ನಿಗದಿತವಾಗಿ ಪರೀಕ್ಷಿಸುವ ವ್ಯವಸ್ಥೆ ಮಾಡಬೇಕು ಮತ್ತು ತಪಾಸಣೆಯ ಅವಧಿಯನ್ನು ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳ ಜೊತೆ ಸಮಾಲೋಚಿಸಿ ನಿರ್ಧರಿಸಬೇಕು.

Formatted: Bullets and Numbering

3. ಸೇವೆ ಒದಗಿಸುವವರು, ತಮ್ಮ ಸಿಬ್ಬಂದಿಗಳಿಗಾಗಿ ಕೆಳಗೆ ತಿಳಿಸಿರುವ ವಸ್ತುಗಳನ್ನು ಪೂರೈಸಬೇಕು.

Formatted: Bullets and Numbering

   a ಸಮುವಸ್ತ್ರ
   b ಕೈ ಚೀಲಗಳು
   c ಮುಖ ಮುಚ್ಚಿಕೆಗಳು
   d ಮುಂಗವಚಗಳು (Approp)
   e ಸಮಂಜಸ ಪಾದರಕ್ಷೆಗಳು
   f ಗಮ್ ಬೂಟುಗಳು
   g ಇತರೆ ಉಪಕರಣಗಳು, ಅಗತ್ಯವಿರುವ ಕಡೆಯಲ್ಲಿ

Formatted: Bullets and Numbering

**ಪರಿಶಿಷ್ಟ 4**

## ಉಪಕರಣಗಳು ಸಲಕರಣೆಗಳು ಮತ್ತು ವಾಹನಗಳ ಪ್ರಮಾಣ ಬದ್ಧತೆ ಮತ್ತು ನಿರ್ದಿಷ್ಟತೆಗಳು

ಯೋಜನೆಯ ಅನುಷ್ಠಾನಕ್ಕಾಗಿ, ಒದಗಿಸಬೇಕಾದ ಸಲಕರಣೆಗಳು ಮತ್ತು ವಾಹನಗಳನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

ಸೇವೆ ಒದಗಿಸುವವರು ಒದಗಿಸಬೇಕಾದ ಸಲಕರಣೆಗಳು

| ಕ್ರಮ ಸಂಖ್ಯೆ | ಸಾಧನ / ಸಲಕರಣೆ / ವಾಹನಗಳು |
|---|---|
| 1 | ಟ್ರಾಕ್ಟರ್ |
| 2 | ತಳ್ಳು ಗಾಡಿಗಳು |
| 3 | ಉದ್ದ ಹಿಡಿ ಪೊರಕೆಗಳು |
| 4 | ಸಂಗ್ರಾಹಕ ತಟ್ಟೆ |
| 5 | ಲೋಹದ ತಟ್ಟೆ |
| 6 | ಬಂಡಲಿ |
| 7 | ಕೋಲು ಗುದ್ದಲಿ |

**ಪರಿಶಿಷ್ಟ 5**

## ಸಾಧನ / ಸಲಕರಣೆ / ವಾಹನಗಳಿಗೆ ನಷ್ಟ ಭರ್ತಿ ಬಾಂಡ್

ಗೆ,

[ನಗರ ಸ್ಥಳೀಯ ಸಂಸ್ಥೆ ಯ ಹೆಸರು ಮತ್ತು ವಿಳಾಸವನ್ನು ಸೇರಿಸಿ]

ಈ ನಷ್ಟ ಭರ್ತಿ ಬಾಂಡ್‌ನ್ನು [ಸೇವೆ ಒದಗಿಸುವವರ ಹೆಸರನ್ನು ಸೇರಿಸಿ] ರವರು ----------- ಅಲ್ಲಿ ಕಛೇರಿಯನ್ನು ಹೊಂದಿದ್ದು [ನಗರ ಸ್ಥಳೀಯ ಸಂಸ್ಥೆಯ ಹೆಸರು ಸೇರಿಸಿ] ಯ ಹೆಸರಿನಲ್ಲಿ ರೂ [12] ----- ಮೊತ್ತಕ್ಕೆ ---------- ನ ------------ ದಿನದಂದು ನೀಡಿದೆ.

ಆದರೆ [ನಗರ ಸ್ಥಳೀಯ ಸಂಸ್ಥೆಯ ಹೆಸರು ಸೇರಿಸಿ], ಇನ್ನು ಮುಂದೆ ನಗರ ಸ್ಥಳೀಯ ಸಂಸ್ಥೆ ಯೆಂದು ಕರೆಯಲಾಗುವುದು. ಈ ಶಬ್ದವು ಅದರ ವಾರಸುದಾರರು ಮತ್ತು ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ, [ಸೇವೆ ಒದಗಿಸುವವರ ಹೆಸರು] ಇನ್ನು ಮುಂದೆ ಸೇವೆ ಒದಗಿಸುವವರು ಎಂದು ಕರೆಯಲಾಗುವುದು, ರವರೊಡನೆ ಒಪ್ಪಂದಕ್ಕೆ (ಇನ್ನು ಮುಂದೆ "ಒಪ್ಪಂದ" ಎಂದು ಕರೆಯಲಾಗುವುದು) ದಿನಾಂಕ --------- ರಂದು ರೂ. [13] ------- ಮೊತ್ತಕ್ಕೆ ನಿಬಂಧನೆಗಳಂತೆ ಒಳಗಾಗಿರುತ್ತದೆ ಮತ್ತು ಒಪ್ಪಂದದ ಕಾರ್ಯ ನಿರ್ವಹಣೆಗಾಗಿ ನಗರ ಸ್ಥಳೀಯ ಸಂಸ್ಥೆಯು ಒಪ್ಪಂದದಂತೆ [ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆಯು ಒದಗಿಸುವ ಸಾಧನ / ಸಲಕರಣೆ / ವಾಹನಗಳ ಸಂಖ್ಯೆಯನ್ನು ಸೇರಿಸಿ] ನ್ನು ಸೇವೆ ಒದಗಿಸುವವರಿಗೆ ನೀಡುವುದು.

ಮತ್ತು ಅನುಬಂಧ 1 ರಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸಿರುವ ಸಾಧನ / ಸಲಕರಣೆ / ವಾಹನಗಳನ್ನು ನೀಡುವುದನ್ನು ಒಳಗೊಂಡಂತೆ ಸೇವೆ ಒದಗಿಸುವವರು ನಗರ ಸ್ಥಳೀಯ ಸಂಸ್ಥೆಗೆ ನಷ್ಟ ಭರ್ತಿ ಖಾತ್ರಿ ಬಾಂಡ್‌ನ್ನು ರೂ. --------- ಗೆ ನೀಡುವುದು ಮತ್ತು ನಗರ ಸ್ಥಳೀಯ ಸಂಸ್ಥೆ ಮತ್ತು ಸೇವೆ ಒದಗಿಸುವವರು ಈ ನಷ್ಟ ಭರ್ತಿ ಬಾಂಡ್‌ನ್ನು ಸಹಿ ಮಾಡಿರುವುದು.

ಸೇವೆ ಒದಗಿಸುವವರು ಅನುಬಂಧ 1 ರಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸಿರುವ ಸಾಧನ / ಸಲಕರಣ / ವಾಹನಗಳಿಗೆ ನಷ್ಟ ಅಥವಾ ಹಾನಿಯಾದರೆ ನಗರ ಸ್ಥಳೀಯ ಸಂಸ್ಥೆಗೆ ರೂ [14] ---------- ಗಳ ನಷ್ಟ ಭರಿಸುವುದಕ್ಕೆ ಒಪ್ಪಿರುತ್ತದೆ. ಈ ನಷ್ಟ ಭರ್ತಿ ಖಾತ್ರಿ ಬಾಂಡ್‌ನ ಚಾಲ್ತಿಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಯು ಒಂದು ಲಿಖಿತ ಸೂಚನೆಯನುಸಾರ ರೂ [15] -------- ನಷ್ಟ ಭರ್ತಿ ಬೇಡಿಕೆಯನ್ನು ನೀಡಿದ್ದಲ್ಲಿ ಸೇವೆ ಒದಗಿಸುವವರು ಒಪ್ಪಿರುತ್ತಾರೆ, ಯಾವುದೇ ವಿರೋಧವಿಲ್ಲದೆ ಅಥವಾ ತಡವಿಲ್ಲದೆ ನಗರ ಸ್ಥಳೀಯ ಸಂಸ್ಥೆಯ ನಷ್ಟ ಭರ್ತಿ ಬೇಡಿಕೆಯೇ ಅಂತಿಮ ಎಂದು ಸೇವೆ ಒದಗಿಸುವವರು ಒಪ್ಪುವುದು.

ಈ ನಷ್ಟ ಭರ್ತಿ ಬಾಂಡ್‌ನಂತೆ ಜವಾಬ್ದಾರಿಯು ರೂ [16] ---------- ಗಿಂತ ಮೀರಿರುವುದಿಲ್ಲ ಮತ್ತು ಜವಾಬ್ದಾರಿಯು ನಗರ ಸ್ಥಳೀಯ ಸಂಸ್ಥೆಯಿಂದ ಸೇವೆ ಒದಗಿಸುವವರು ಸಾಧನ / ಸಲಕರಣೆ / ವಾಹನಗಳನ್ನು ಸ್ವೀಕರಿಸಿದ ದಿನದಿಂದ ಚಾಲ್ತಿಯಲ್ಲಿರುತ್ತದೆಯೆಂದು ಒಪ್ಪಲಾಗಿದೆ.

ಈ ನಷ್ಟ ಭರ್ತಿ ಬಾಂಡ್ -------- (ಮುಕ್ತಾಯದ ದಿನಾಂಕ) ವರೆಗೆ ಚಾಲ್ತಿಯಲ್ಲಿರುತ್ತದೆ.

ಸೇವೆ ಒದಗಿಸುವವರ ಪರವಾಗಿ

ಅಧಿಕೃತ ಸಹಿ ಮಾಡುವವರು

---

[12] ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆ ನೀಡುವ ಸಲಕರಣೆಗಳ ಬೆಲೆಗೆ ಸಮ

[13] ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆ ನೀಡುವ ಸಲಕರಣೆಗಳ ಬೆಲೆಗೆ ಸಮ

[14] ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆ ನೀಡುವ ಸಲಕರಣೆಗಳ ಬೆಲೆಗೆ ಸಮ

[15] ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆ ನೀಡುವ ಸಲಕರಣೆಗಳ ಬೆಲೆಗೆ ಸಮ

[16] ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆ ನೀಡುವ ಸಲಕರಣೆಗಳ ಬೆಲೆಗೆ ಸಮ

**ಪರಿಶಿಷ್ಟ 6**

## ಕಾರ್ಯಾಚರಣೆ ಮತ್ತು ನಿರ್ವಹಣೆಯ ನಿರ್ದಿಷ್ಟತೆಗಳು

1. ಸೇವೆ ಒದಗಿಸುವವರು ನಿಶ್ಚಿತ ಪಡಿಸಬೇಕಾದ ಅಂಶಗಳೆಂದರೆ

**Formatted:** Bullets and Numbering

a) ಪುರಸಭಾ ಘನತ್ಯಾಜ್ಯ ಸಂಗ್ರಹಕ್ಕೆ ಬಳಸುವ ತೊಟ್ಟಿಗಳಲ್ಲಿ (ಬಿನ್‌ಗಳು) ಯಾವುದೇ ಒಡಕು/ಸೀಳು/ಸೋರಿಕೆ/ಮುಚ್ಚಳಗಳ ಸ್ಥಳಾಂತರ ಆಗಿರಬಾರದು.

**Formatted:** Bullets and Numbering

b) ಸಲಕರಣೆಗಳ ಮತ್ತು ವಾಹನಗಳ ತಯಾರಕರು ನೀಡುವ ಕೈಪಿಡಿಯಲ್ಲಿ ಸೂಚಿಸಿರುವ ಮಾರ್ಗದರ್ಶಿಗಳ ಅನುಸಾರವಾಗಿ ವಾಹನಗಳ ನಿರ್ವಹಣೆಯ ಕ್ರಮಗಳನ್ನು ಕೈಗೊಳ್ಳಬೇಕು.

**Formatted:** Bullets and Numbering

c) ವಾಹನಗಳ ಸರಬರಾಜುದಾರರು ಒದಗಿಸಿರುವ ಕೈಪಿಡಿಯಲ್ಲಿ ಸೂಚಿಸಿರುವಂತೆ ನಿಗದಿತ ಕಾಲಕ್ಕೆ ವಾಹನಗಳ ಸರ್ವಿಸಿಂಗ್ ಮಾಡಿಸಬೇಕು.

**Formatted:** Bullets and Numbering

d) ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆ ಮಾಡುವ ಸಂದರ್ಭಗಳಲ್ಲಿ ವಾಹನಗಳು ಮತ್ತು ಇತರೆ ಸಲಕರಣೆಗಳ ಮೇಲೆ ನಿಗದಿಪಡಿಸಿರುವುದಕ್ಕಿಂತ ಅದಿಕ ಭಾರವನ್ನು ಹೇರಬಾರದು.

**Formatted:** Bullets and Numbering

e) ವಾಹನಗಳು, ಹೊಗೆ ಉಗುಳುವ ಮಿತಿ ಮತ್ತು ವಾಹನಗಳಿಗೆ ಸಂಬಂಧಿಸಿದ ಯಾವುದೇ ಕಾನೂನು / ನಿಬಂಧನೆಗಳನ್ನು ಅನುಸರಿಸಬೇಕು.

**Formatted:** Bullets and Numbering

[ಸಲಕರಣೆಗಳು ಮತ್ತು ವಾಹನಗಳ ಕಾರ್ಯನಿರ್ವಹಣೆ ಮತ್ತು ಸಂರಕ್ಷಣೆಯ ನಿರ್ದಿಷ್ಟತೆಗಳನ್ನು, ಮತ್ತಿತರ ಮಾಹಿತಿಗಳನ್ನು ಸರಬರಾಜುದಾರರ ಜತೆಗೆ ಸಮಾಲೋಚಿಸಿ ಸೇರಿಸಿ]

**ಪರಿಶಿಷ್ಟ 7**

## ಅನುಸರಣೆ ಪ್ರಮಾಣ ಪತ್ರ

ಯೋಜನೆಯಲ್ಲಿ ಕೊಟ್ಟಿರುವ ಎಲ್ಲಾ ಕಟ್ಟುಪಾಡುಗಳನ್ನು, ಸೇವೆ ಒದಗಿಸುವವರು ನಿರ್ವಹಿಸುತ್ತಿದ್ದಾರೆಂದು ಪರಿಶೀಲಿಸಲು ಮತ್ತು ಪ್ರಮಾಣಿಕರಿಸಲು, ನಗರ ಸ್ಥಳೀಯ ಸಂಸ್ಥೆಯು ಒಬ್ಬ ಅಧಿಕಾರಿಯನ್ನು ನೇಮಿಸುತ್ತದೆ. ಆ ಅಧಿಕಾರಿಯು, ಕೆಳ ಸೂಚಿಸಿರುವ ನಮೂನೆಯಂತೆ ಪ್ರಮಾಣೀಕರಿಸಬೇಕು.

ತಿಂಗಳು [ತಿಂಗಳನ್ನು ಸೇರಿಸಿ] 2009

| ತಿಂಗಳಲ್ಲಿನ ದಿನಗಳು | ಒಪ್ಪಿತ ನಿರ್ವಹಣಾ ಯೋಜನೆ ಬೀದಿಗಳನ್ನು ಗುಡಿಸುವುದು, ಮೋರಿಗಳನ್ನು ಸ್ವಚ್ಛಗೊಳಿಸುವುದು, | ಬೀದಿ ಗುಡಿಸಿದ ಕಸ ಮತ್ತು ಹೂಳನ್ನು ಸಂಗ್ರಹಿಸುವುದು ಮತ್ತು ನಿಗದಿತ ಸ್ಥಳಗಳಿಗೆ ಸಾಗಿಸುವುದು | ಕಟ್ಟಡ ಭಗ್ನಾವಶೇಷ ಗಳನ್ನು ಸಂಗ್ರಹಿಸು ವುದು ಮತ್ತು ಸಾಗಿಸುವುದು | ನಗರ ಸ್ಥಳೀಯ ಸಂಸ್ಥೆ ಆರೋಗ್ಯ ನರೀಕ್ಷಕರಸಹಿ |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |
| 10 | | | | |
| ಮತ್ತು ಮುಂದಕ್ಕೆ | | | | |

**ಪರಿಶಿಷ್ಟ – 8**

## (ದಂಡ) ಜುಲ್ಮಾನೆಗಳು

ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳು

| ಕ್ರಮ ಸಂಖ್ಯೆ | ವಿವರ | ದಂಡ |
|---|---|---|
| 1 | ಒಂದು ದಿನದ ಮಟ್ಟಿಗೆ ಕೂಡ, ಬೀದಿ ಗುಡಿಸುವುದು, ಪಾದಚಾರಿ ಕಾಲ್ದಾರಿಗಳನ್ನು ಸ್ವಚ್ಛಗೊಳಿಸುವುದು ಮತ್ತು ರಸ್ತೆ ಬದಿಯ ಮೋರಿಗಳನ್ನು ಸ್ವಚ್ಛಗೊಳಿಸುವುದು ಮತ್ತು ಅದನ್ನು ನಿಗದಿತ ಸ್ಥಳಕ್ಕೆ ಸಾಗಿಸುವುದನ್ನು ತಪ್ಪಿಸಿದರೆ | ತಿಂಗಳ ಪಾವತಿಯ ಶೇ 3 ರಷ್ಟು |
| 2 | ಒಂದು ದಿನದ ಮಟ್ಟಿಗೆ ಕೂಡ, ನಗರ ಸ್ಥಳೀಯ ಸಂಸ್ಥೆಯು ಪ್ರಕಟಣೆ ನೀಡಿದ 7 ದಿನದೊಳಗೆ, ಕಟ್ಟಡ ಭಗ್ನಾವಶೇಷಗಳನ್ನು ಸಂಗ್ರಹಿಸಿ ಅದನ್ನು ನಿಗದಿತ ಸ್ಥಳಕ್ಕೆ ಸಾಗಿಸಬೇಕು | ತಿಂಗಳ ಪಾವತಿಯ ಶೇ 3 ರಷ್ಟು |
| 3 | 7 ದಿನಗಳ ಕಾಲ ಸಲಕರಣೆಗಳನ್ನು ಒದಗಿಸದಿದ್ದರೆ(ಈ ಉಪವಾಕ್ಯವನ್ನು ಸೇವೆ ಒದಗಿಸುವವರು ಸಲಕರಣೆಗಳು ಮತ್ತು ವಾಹನಗಳನ್ನು ನೀಡುವುದಾಗಿದ್ದರೆ ಮಾತ್ರ ಸೇರಿಸಿ) | ತಿಂಗಳ ಪಾವತಿಯ ಶೇ 2 ರಷ್ಟು |
| 4 | ನಿರಂತರವಾಗಿ 7 ದಿನಗಳ ಕಾಲ ಒಪ್ಪಂದದ ಇತರ ಕಟ್ಟುಪಾಡುಗಳನ್ನು ನಿರ್ವಹಿಸಲು ವಿಫಲವಾದಲ್ಲಿ | ತಿಂಗಳ ಪಾವತಿಯ ಶೇ 2 ರಷ್ಟು |

ಸೂಚನೆ: ದಂಡದ ಒಟ್ಟು ಮೊತ್ತವು ಗುತ್ತಿಗೆ ಮೌಲ್ಯದ ಶೇ 10 ರಷ್ಟನ್ನು ಮೀರಬಾರದು.

**ಅನುಬಂಧ – 1**

## ಸಾಧನ, ಸಲಕರಣೆ ಮತ್ತು ವಾಹನಗಳ ಮಾನದಂಡಗಳು ಮತ್ತು ನಿರ್ದಿಷ್ಟತೆಗಳು

ಯೋಜನೆಯ ಅನುಷ್ಠಾನಕ್ಕಾಗಿ, ಒದಗಿಸಬೇಕಾದ ಸಲಕರಣೆಗಳು ಮತ್ತು ವಾಹನಗಳನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಸಾಧನ / ಸಲಕರಣೆ / ವಾಹನಗಳು | ಸಂಖ್ಯೆ |
|---|---|---|
| 1 | ಟ್ರಾಕ್ಟರ್ | 03 |
| 2 | ತಳ್ಳು ಗಾಡಿಗಳು | 26 |
| 3 | ಉದ್ದ ಹಿಡಿ ಪೊರಕೆಗಳು | 205 |
| 4 | ಸಂಗ್ರಾಹಕ ತಟ್ಟೆ | 102 |
| 5 | ಲೋಹದ ತಟ್ಟೆ | 102 |
| 6 | ಬಂಡಲಿ | 59 |
| 7 | ಕೋಲು ಗುದ್ದಲಿ | 9 |